TESS India

# Transforming teaching-learning process: promoting inclusion in your school

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು:ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿ ಕಲಿಕೆಯ ಸಂಸ್ಕೃತಿಯನ್ನು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ** (Open Educational Resource-OER) ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್-ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಪೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ** ಬಗ್ಗೆ

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL13v1*
*Karnataka*

*Except for third party materials and oottherwise stated, this content is made availabblle under a Creative Commons Attribution-ShareAlike licecennce: http://creativecommons.org/licenses/by--sa/3.0/*

*TESS-India is led by The Open University UK and funded by UK aid from the UK government*

# ಈ ಘಟ್ಯಭಾಗದಲ್ಲೇನಿದೆ

ಕಳೆದ ಮೂರು ದಶಕಗಳಿಂದ ಭಾರತ ಸರ್ಕಾರವೂ ಸೇರಿದಂತೆ, ವಿಶ್ವಾದ್ಯಂತ ಹಲವು ಸರ್ಕಾರಗಳು ಲಿಂಗಾಧಾರಿತ ಹಾಗೂ ಸಾಮಾಜಿಕ ಭೇದವನ್ನು ತೊಡೆದುಹಾಕುವುದಾಗಿ ಘೋಷಿಸಿವೆ. ಉತ್ತಮಗುಣಮಟ್ಟದ ಶಿಕ್ಷಣ ಹಾಗೂ ಅದನ್ನು ಶಿಕ್ಷಕರಿಗೆ ಹೇಗೆ ಒದಗಿಸಬೇಕು ಎನ್ನುವ ವಿಚಾರದಲ್ಲಿನ ಗಮನೀಯ ಬದಲಾವಣೆಗಳೇ ಈ ಕಾಲಘಟ್ಟದ ಲಕ್ಷಣವೇ ಆಗಿದೆ. ಹೀಗೆ ಬದಲಾಗುತ್ತಿರುವ ಅಂಶಗಳನ್ನು ಕೆಳಕಂಡಂತೆ ಕ್ರೋಡೀಕರಿಸಬಹುದು-

- ಭೇದಭಾವಗಳನ್ನು ಹೋಗಲಾಡಿಸುವತ್ತ ಹೆಚ್ಚಿನ ಒತ್ತು
- ಸರ್ವರಿಗೂ ಸಮಾನವಾದ ಶಿಕ್ಷಣ
- ವಿದ್ಯಾರ್ಥಿಕೇಂದ್ರಿತ ಶಿಕ್ಷಣ, ಅಗತ್ಯವನ್ನಾಧರಿಸಿ ಶಿಕ್ಷಣ
- ಪ್ರತಿಯೊಂದು ಮಗುವೂ ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದರ ಕಡೆಗೆ ಹೆಚ್ಚು ಗಮನ

National Policy on Education (NPE, 1986), the National Curriculum for Elementary and Secondary Education (1988), ಮತ್ತು the Revised NPE and Program of Action (1992) ಮುಂತಾದ ಭಾರತದ ಪ್ರಮುಖ policy ದಾಖಲೆಗಳಲ್ಲಿ ಈ ಬಗ್ಗೆ ಉಲ್ಲೇಖಗಳಿವೆ. ಇತ್ತೀಚೆಗೆ the National Curriculum Framework (NCF) of 2005 ಒಂದು ಸಮಗ್ರದೃಷ್ಟಿಯನ್ನು ತೆರೆದಿಟ್ಟಿದೆ. ಇದು ಎಲ್ಲ ಮಕ್ಕಳಿಗೂ ಉತ್ತಮ ಗುಣಮಟ್ಟದ  ಶಿಕ್ಷಣವನ್ನು ಕೊಡುವ ವಿಧಾನಗಳನ್ನು ಒಳಗೊಂಡಿದೆ. ಇದರ ಪ್ರಕಾರ ಶಿಕ್ಷಕರಲ್ಲಿ ಇರಬೇಕಾದ ಮುಖ್ಯಾಂಶಗಳು-

- ಪ್ರತಿಯೊಂದು ಮಗುವಿನ ಅಗತ್ಯಗಳ ಬಗ್ಗೆ ಸಂವೇದನಶೀಲವಾಗಿರುವುದು
- ವಿದ್ಯಾರ್ಥಿಕೇಂದ್ರಿತವೂ, ಸಾಮಾಜಿಕ ಪ್ರಸ್ತುತತೆಯನ್ನೂ ಹಾಗೂ ಸಮಾನವಾದ ಕಲಿಯುವ-ಕಲಿಸುವ ಸಾಮರ್ಥ್ಯ
- ಮಕ್ಕಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರ್ಥಮಾಡಿಕೊಳ್ಳಬೇಕು

ಶಿಕ್ಷಕರು ತಮ್ಮ ವೃತ್ತಿಯಲ್ಲಿ ಯಶಸ್ವಿಯಾಗಬೇಕಾದರೆ ವಿದ್ಯಾರ್ಥಿಗಳು ಹೊತ್ತಿರುವ ಅಸಂಖ್ಯ ನಿರೀಕ್ಷೆಗಳು ಹಾಗೂ ಅಗತ್ಯಗಳನ್ನು ಅತ್ಯವಶ್ಯಕವಾಗಿ ಅರ್ಥಮಾಡಿಕೊಳ್ಳುತ್ತ ಸ್ಪಂದಿಸಬೇಕು. ಮತ, ಜಾತಿ, ವರ್ಗ, ಲಿಂಗ ಹಾಗೂ ದೇಹಬಲಗಳ ಭೇದಗಳನ್ನು ಎಣಿಸದೆ, ಎಲ್ಲ ಮಕ್ಕಳನ್ನೂ ಅರ್ಥಪೂರ್ಣವಾದ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಬೇಕು. ಇದನ್ನೇ The Right to Education Act 2009 (RtE) ಮತ್ತಷ್ಟು ದೃಢಗೊಳಿಸುತ್ತ, ಲಿಂಗ ಹಾಗೂ ಸಾಮಾಜಿಕ ಭೇದಗಳಿಲ್ಲದೆ ಎಲ್ಲ ವಿದ್ಯಾರ್ಥಿಗಳೂ ಸಮಾನವಾದ ಶಿಕ್ಷಣವನ್ನು ಪಡೆಯುವಂತೆ, ಭೌತಿಕ ಹಾಗೂ ಶೈಕ್ಷಣಿಕ ಪರಿಸರಗಳ, ಪಠ್ಯವಿವರಗಳ ಹಾಗೂ ಪ್ರಯೋಗಾತ್ಮಕ ಶಿಕ್ಷಣದ  ಬಗ್ಗೆ ಸರ್ವರಿಗೂ ಸ್ವೀಕಾರ್ಯವಾಗುವಂತಹ ನಿಯಮಗಳನ್ನು ಹಾಕಿಕೊಟ್ಟಿದೆ.

ಶಿಕ್ಷಕರ ಕೌಶಲಗಳು, ಮನೋಭಾವ ಹಾಗೂ ಪ್ರೇರೇಪಿಸುವ ಗುಣವು ಹಿಂದುಳಿದ ಜನಾಂಗಗಳ ಮಕ್ಕಳ ಕಲಿಕೆ, ಭಾಗವಹಿಸುವಿಕೆ ಹಾಗೂ ಸಾಧನೆಗಳ ಮಟ್ಟವನ್ನು ಹೆಚ್ಚಿಸಬಲ್ಲುದು ಎನ್ನುತ್ತವೆ ಸಂಶೋಧನೆಗಳು. ಶಾಲೆಯ ತರಗತಿಯ ಪರಿಸರದಲ್ಲಿ ಸಮಾನವಾದ ಶಿಕ್ಷಣವನ್ನು ತಲುಪಿಸುವಲ್ಲಿ ಶಾಲಾಶಿಕ್ಷಕರ ಯೋಗದಾನ ಅತಿಮುಖ್ಯವಾದದ್ದು. ಎಲ್ಲಕ್ಕಿಂತ ಮುಖ್ಯವಾಗಿ ಶಾಲಾ ಶಿಕ್ಷಕರಲ್ಲಿ ಇರಬೇಕಾದ ಅಂಶಗಳು-

- ಮಕ್ಕಳ ಸಧ್ಯದ ಮಟ್ಟ ಹೇಗೇ ಇರಲಿ, ಪರಿಣಾಮದಲ್ಲಿ ಗುಣಮಟ್ಟ ಸತ್ವಪೂರ್ಣವಾಗಿರುತ್ತದೆ ಎನ್ನುವ ವಿಶ್ವಾಸ ಶಿಕ್ಷಕರಲ್ಲಿರಬೇಕು.
- ಎಲ್ಲ ಮಕ್ಕಳ ಗುಣಮಟ್ಟವನ್ನು ಹೆಚ್ಚಿಸುವತ್ತ ಸಹಶಿಕ್ಷಕರನ್ನೂ ವಿದ್ಯಾರ್ಥಿಗಳನ್ನೂ ಪ್ರೇರೇಪಿಸಬೇಕು
- ಮಕ್ಕಳ ಯಶಸ್ಸನ್ನು ಗಣಿಸುವಾಗ ಕೇವಲ ಶೈಕ್ಷಣಿಕ ಪ್ರಗತಿಯನ್ನಷ್ಟೇ ನೋಡಬಾರದು.

ತನ್ನ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವತ್ತ, ಹಾಗೂ ಎಲ್ಲ ರಾಜ್ಯಗಳಿಗೆ ತಮ್ಮ ವೈಶಿಷ್ಟ್ಯಗಳನ್ನು ಕಾಪಾಡಿಕೊಳ್ಳುವತ್ತ ನಿರ್ದೇಶನವನ್ನೀಯುವ the United Nations Charter on the Rights of the Child (1989) ಬಗ್ಗೆ ಶಿಕ್ಷಕರೆಲ್ಲರಿಗೂ ತಿಳಿದಿರಬೇಕು. ಮುಂದಾಳ್ತನ ವಹಿಸುವುದು, ತನ್ಮೂಲಕ ನಿಮ್ಮ ಶಾಲಾಸಮುದಾಯದಲ್ಲಿ ಭೇದರಹಿತಭಾವವನ್ನೂ ವರ್ತನೆಗಳನ್ನು ಪ್ರೋತ್ಸಾಹಿಸುವುಸು ಶಾಲಾಶಿಕ್ಷಕರ ಕರ್ತವ್ಯ



**Figure 1** Promoting inclusion in your school.

## ಕಲಿಕೆಯ ಡೈರಿ

ಈ ಪಠ್ಯಭಾಗದಲ್ಲಿ ನಿಮಗೆ ನಿಮ್ಮ ಕಲಿಕೆಯ ಡೈರಿಯಲ್ಲೋ, ಪುಸ್ತಕದಲ್ಲೋ ಪಾಠಬಿಂದುಗಳನ್ನು ಬರೆದಿಟ್ಟುಕೊಳ್ಳುವಂತೆ ಸೂಚಿಸಲಾಗುತ್ತದೆ. ಹಾಗೆ ಮಾಡುವುದರ ಮೂಲಕ ನಿಮ್ಮ ಎಲ್ಲ ಆಲೋಚನೆಗಳೂ ಪೂರ್ವಯೋಜನೆಗಳೂ ಒಂದು ಕಡೆ ದಾಖಲೆಯಾಗುತ್ತವೆ. ನೀವು ಈಗಾಗಲೇ ಅಂತಹದ್ದೊಂದನ್ನು ಪ್ರಾರಂಭಿಸಿರಬಹುದು. ನೀವು ಈ ಪಠ್ಯದಲ್ಲಿ ಒಬ್ಬರೇ ತೊಡಗಿರಬಹುದು. ಆದರೆ ಮತ್ತೊಬ್ಬರು ಶಾಲಮುಖಂಡರ ಜೊತೆಗೂದರೆ ನೀವು ಇನ್ನೂ ಹೆಚ್ಚು ಕಲಿಯಬಲ್ಲಿರಿ. ಆ ವ್ಯಕ್ತಿಒ ನಿಮ್ಮ ಸಹೋದ್ಯೋಗಿಯಾಗಿರಬಹುದು ಅಥವಾ ಮುಂದೆ ಕಾರ್ಯಸಂಬಂಧ ಬೆಳೆಸಿಕೊಳ್ಳಬೇಕಾದ ವ್ಯಕ್ತಿಯೂ ಆಗಿರಬಹುದು. ಇದನ್ನು ನೀವು ವ್ಯವಸ್ಥಿತವಾಗಿ ಮಾಡಬಹುದು ಅಥವಾ ಅನೌಪಚಾರಿಕವಾಗಿಯೂ ಮಾಡಬಹುದು. ನಿಮ್ಮ ದೀರ್ಘಕಾಲದ ಪೂರ್ವಯೋಜನೆಗಳನ್ನೂ ಹಾಗೂ ವಿಕಾಸವನ್ನೂ ಚರ್ಚಿಸುವ ಸಮಾಲೋಚನೆಗಳಲ್ಲಿ (Meeting) ನಿಮ್ಮ ಕಲಿಕೆಯ ಡೈರಿಯ ಪಾಠ ಬಿಂದುಗಳು ಉಪಯುಕ್ತವಾಗುತ್ತವೆ.

# ಈ ಪಠ್ಯಭಾಗದಿಂದ ಶಿಕ್ಷಕರು ಏನನ್ನು ಕಲಿಯಬಹುದು

- ವಿಭಿನ್ನತೆಗಳು, ಸಮಾನತೆ ಹಾಗೂ ಭೇದರಾಹಿತ್ಯದ ಭಾವವನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಬೆಳೆಸಿಕೊಳ್ಳುವುದು.
- ವಿದ್ಯಾರ್ಥಿಗಳ ಕಲಿಕೆಯ ಪರಿಣಾಮಗಳನ್ನು ಉತ್ತಮಪಡಿಸುವ ಕಾರ್ಯಕಲಾಪಗಳನ್ನು ಪ್ರಾಮುಖ್ಯತೆಗನುಸಾರವಾಗಿ ಯೋಜಿಸಿಕೊಳ್ಳುವುದು
- ಭೇದಭಾವಗಳನ್ನು ನಿವಾರಿಸುವಂತಹ ಪೂರ್ವಯೋಜನೆ ಹಾಗೂ ಕಾರ್ಯರೂಪಗಳನ್ನು ಇತರರೊಂದಿಗೆ ಚರ್ಚಿಸಿ ನಿರ್ಣಯಿಸುವುದು.
- ನಿಮ್ಮ ಪ್ರಯತ್ನಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವುದು ಪ್ರಮುಖ ಎಂದು ತಿಳಿದಿರಲಿ

# 1 ಸಮಾನತೆ ಹಾಗೂ ಭೇದರಾಹಿತ್ಯವನ್ನು ಅಳವಡಿಸುವುದು

ಭಾರತೀಯಜನಾಂಗವು ಇಷ್ಟು ವಿಭಿನ್ನತೆ-ವೈಶಿಷ್ಟ್ಯಗಳಿಂದ ಕೂಡಿರುವುದು ಬಹಳ ಹೆಮ್ಮೆಯ ಹಾಗೂ ಸಂಭ್ರಮದ ವಿಚಾರ. 'ವಿಭಿನ್ನತೆ' ಎಂಬ ಶಬ್ದವು 'ಬಹು ಬಗೆಗೆಗಳನ್ನೂ' 'ಬಹು ವ್ಯತ್ಯಾಸಗಳನ್ನೂ' ಸೂಚಿಸುತ್ತದೆ. ಬದಲಾಗುತ್ತಿರುವ ಸಂಕೀರ್ಣ ಪ್ರಪಂಚದಲ್ಲಿ ಈ ವಿಭಿನ್ನತೆಗಳು ಜೀವನದಲ್ಲಿ ಬಣ್ಣವನ್ನು ತುಂಬುತ್ತವೆ. ಜೊತೆಗೆ ಅನೇಕ ಪರಿಹಾರಗಳನ್ನೂ ಸಾಧ್ಯತೆಗಳನ್ನೂ ತೆರೆದಿಡಬಲ್ಲವು. ಶಾಲೆಯ ಹಿನ್ನಲೆಯಲ್ಲಿ ವಿಭಿನ್ನತೆಗಳು ಎಂದರೆ - ಭಾಷೆ, ಪ್ರಾದೇಶಿಕತೆ, ಲಿಂಗ, ಮತ-ಜಾತಿ, ವರ್ಗ, ಆರ್ಥಿಕ ಸ್ಥಿತಿಗತಿ, ದೈಹಿಕ ಸಾಮರ್ಥ್ಯ, ವಸತಿ, ವಯಸ್ಸು ಹಾಗೂ ಭೂತಪೂರ್ವ

ಶಾಲಾಶಿಕ್ಷಣಗಳನ್ನು ಒಳಗೊಂಡಿರುತ್ತದೆ. ಮೊದಮೊದಲು ಯಾವ ಇಬ್ಬರು ವಿದ್ಯಾರ್ಥಿಗಳೂ ಒಂದೇ ಪ್ರಾರಂಭಿಕ ಸ್ತರವನ್ನು ಹೊಂದಿರುವುದಿಲ್ಲ. ಒಂದೇ ಬಗೆಯ ಕಲಿಕೆಯ ಕ್ರಮವನ್ನಾಗಲೀ ಪಠ್ಯದ ಪರಿಚಯವನ್ನಾಗಲಿ ಹೊಂದಿರುವುದಿಲ್ಲ. ವಿಭಿನ್ನ ಹಿನ್ನಲೆ, ಸಂಸ್ಕೃತಿ ಹಾಗೂ ಅನುಭವಗಳನ್ನು ಅರ್ಥಮಾಡಿಕೊಂಡು ಮೆಚ್ಚಬಲ್ಲಂತಹ ಶಿಕ್ಷಕರು ಮಾತ್ರವೇ ವಿದ್ಯಾರ್ಥಿಗಳನ್ನು ಅವರವರಿಗೆ ಅರ್ಥವಾಗುವಂತಹ ರೀತಿಯಲ್ಲಿ ತೊಡಗಿಸಬಲ್ಲರು. NPEಯನ್ನು NCF ಉಲ್ಲೇಖಿಸುತ್ತದೆ: "ಸಮಾನತೆಯನ್ನು ಸಾಧಿಸಬೇಕಾದರೆ, ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸಬೇಕಾಗುತ್ತದೆ. ಅದು ಕೇವಲ ಅಧಿಕಾರವನ್ನಷ್ಟೇ ಅಲ್ಲದೆ ಪರಿಣಾಮದಲ್ಲೂ ಫಲಿಸುವಂತಾಗಬೇಕು. ಪಠ್ಯದ ಮುಖ್ಯಾಂಶದಲ್ಲೇ ಎಲ್ಲರ ಜನ್ಮಜಾತ ಸಮಾನತೆಯ ಬಗ್ಗೆ ಜಾಗೃತಿಯನ್ನು ಮೂಡಿಸುವ ಅಂಶಗಳು ಸೇರಿರುತ್ತವೆ". ಸಾಮಾಜಿಕ ಪರಿಸರದಿಂದಾಗಿಯೂ ಜನ್ಮದ ಹಿನ್ನಲೆಯಿಂದಾಗಿಯೂ ಹುಟ್ಟಿರಬಹುದಾದ ಭೇದಭಾವ ಮತ್ತು ಧೋರಣೆಗಳನ್ನು ತೊಡೆದುಹಾಕುವುದೇ ಉದ್ದೇಶ. ಈ ನಿಯಮವನ್ನು ಯುಥಾವತ್ತಾಗಿ ನಿಮ್ಮ ಶಾಲೆಯಲ್ಲಿ ಅಳವಡಿಸುವುದು ಕಷ್ಟವೆನಿಸಬಹುದು. ಹಾಗಾಗಿ ವೈಶಿಷ್ಟ್ಯಗಳು, ಸಮಾನತೆ ಹಾಗೂ ಭೇದರಾಹಿತ್ಯವನ್ನು ಅಳವಡಿಸುವಲ್ಲಿ ಶಾಲಾ ಮುಖಂಡರು ತಮ್ಮ ಸಿಬ್ಬಂದಿಗೂ ಶಾಲೆಯ ವಿಸ್ತೃತ ಸಮುದಾಯಕ್ಕೂ ಈ ನಿಟ್ಟಿನಲ್ಲಿ ಸಹಾಯವನ್ನು ಒದಗಿಸಬೇಕು. ಇದನ್ನು ಮೂರು ಮುಖ್ಯ ಸ್ತರಗಳಲ್ಲಿ ಮಾಡಬಹುದು:

೧. ಶಾಲೆಯ ಹಿನ್ನಲೆಯಲ್ಲಿ ವಿಭಿನ್ನತೆಗಳು, ಸಮಾನತೆ ಹಾಗೂ ಭೇದರಾಹಿತ್ಯಗಳ ಕಲ್ಪನೆ ಏನು ಎನ್ನುವುದು ಎಲ್ಲ ಶಿಕ್ಷಕರಿಗೂ ವಿಸ್ತೃತವಲಯಕ್ಕೂ ಅರ್ಥವಾಗಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು. ವಿದ್ಯಾರ್ಥಿಗಳ ಪ್ರಗತಿ ಹಾಗೂ ಅಭ್ಯಾಸಗಳ ಪ್ರಭಾವದವೂ ಇದರಲ್ಲಿ ಸೇರುತ್ತದೆ.

೨. ಅಸಮಾನತೆ-ಭೇದಭಾವಗಳನ್ನು ನಿವಾರಿಸುವ ನಿಟ್ಟಿನಲ್ಲಿ ಎಲ್ಲರೊಡನೆ ಕೂಡಿ ಯೋಜನೆ ಹೂಡಬೇಕು, ಕ್ರಮ ತೆಗೆದುಕೊಳ್ಳಬೇಕು. ತಮ್ಮದೇ ಕಲಿಸುವ ವಿಧಾನ ಹಾಗೂ ಕಾರ್ಯಗಳಿಂದಾಗಿ ಹೇಗೆ ಬದಲಾವಣೆಗಳಾಗುತ್ತವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

೩. ಅಧ್ಯಾಪನ, ಕಲಿಯುವಿಕೆ ಹಾಗೂ ಬೆಂಬಲಗಳ ಬದಲಾವಣೆಗಳು ವಿದ್ಯಾರ್ಥಿಗಳ ಮೇಲೆ ಹೇಗೆ ಸತ್ಪರಿಣಾಮ ಬೀರುತ್ತಿವೆ ಎನ್ನುವುದನ್ನು ಅವಲೋಕಿಸುತ್ತ ಅರ್ಥಮಾಡಿಕೊಳ್ಳಬೇಕು.

ನಿಮ್ಮ ಶಾಲೆಯನ್ನು ಉತ್ತಮಗೊಳಿಸಲು ವಿಭಿನ್ನತೆಗಳ ಕುರಿತಾದ ಮಾಹಿತಿ' ಎನ್ನುವ ಪಠ್ಯಭಾಗವನ್ನು ನೀವು ಈಗಾಗಲೇ ಓದಿದ್ದರೆ, ಮಾಹಿತಿ ಎನ್ನುವುದು ವಿಭಿನ್ನತೆಯ ಅಂಶಗಳನ್ನು ಹೇಗೆ ಮೆರಗು ಗೊಳಿಸಬಲ್ಲುದು ಎನ್ನುವುದು ನಿಮ್ಮ ಮನಸ್ಸಿಗೆ ಬಂದಿರಬೇಕು. ನಿಮ್ಮ ಶಾಲೆಯಲ್ಲಿ ಪ್ರಾಮುಖ್ಯತೆಯ ಕ್ಷೇತ್ರಗಳಲ್ಲಿ ಕೆಲಸವನ್ನೂ ನೀವು ಶುರುಮಾಡಿರಬಹುದು. ಶಿಬ್ಬಂದಿಯ ಶಿಕ್ಷಣವಿಧಾನದಲ್ಲಿ ಹೇಗೆ ಭೇದರಾಹಿತ್ಯವನ್ನು ಅಳವಡಿಸಬಹುದು ಎನ್ನುವುದಕ್ಕೆ ಸಂಬಂಧಿಸಿದಂತೆ ನೀವು ಕಲೆ ಹಾಕಿರುವ ಮಾಹಿತಿ ಹಾಗೂ ಪ್ರಾಮುಖ್ಯತೆಗಳ ಪಟ್ಟಿಯು ಉಪಯುಕ್ತವಾಗುತ್ತದೆ.

# 2 ವಿಭಿನ್ನತೆ, ಸಮಾನತೆ ಹಾಗೂ ಭೇದರಾಹಿತ್ಯಗಳನ್ನು ಇತರರಿಗೂ ಅರ್ಥಪಡಿಸುವುದು

'ಭೇದರಾಹಿತ್ಯ'(inclusion) ಎನ್ನುವ ಶಬ್ದದ ಸ್ಪಷ್ಟ ಕಲ್ಪನೆ ನಿಮ್ಮ ಸಿಬ್ಬಂದಿಯಲ್ಲಿ ಕೆಲವರಿಗೆ ಈಗಾಗಲೇ ಇರಬಹುದು, ಇನ್ನು ಕೆಲವರಿಗೆ ಇಲ್ಲದೇ ಇರಬಹುದು. ಇನ್ನು ಹಲವರಿಗೆ ವಿಭಿನ್ನತೆಯ ಕಲ್ಪನೆ ಹಾಗೂ ನಿಮ್ಮ ಶಾಲೆಯ ಹಿನ್ನಲೆಯಲ್ಲಿ ಅದರ ಪಾತ್ರ ಹಾಗೂ ವಿದ್ಯಾರ್ಥಿಅಗಳ ಮೇಲೆ ಅದು ಹೇಗೆ ಪರಿಣಮಿಸುತ್ತದೆ ಎನ್ನುವುದನ್ನು ಅರ್ಥಪಡಿಸಲು ಹಲವರಿಗೆ ತಜ್ಞರಿಂದ ತರಬೇತಿಯೇ ಬೇಕಾದೀತು. ವೈಯಕ್ತಿಕವಾಗಿ ತಾವೂ ಈ ಕಲ್ಪನೆಯ ಪ್ರಭಾವಕ್ಕೆ ಒಳಪಟ್ಟಾರು ಎನ್ನುವುದನ್ನು ಸಿಬ್ಬಂದಿಗೆ ಅರ್ಥಪಡಿಸಲು ಅವರೊಂದಿಗೆ ಸಮಯವನ್ನು ಕಳೆಯಬೇಕು, ಸಹಕಾರ ನೀಡಬೇಕು. ಇದಕ್ಕಾಗಿ ಒಂದು ಕಾರ್ಯಕಾರೀ ಸಮಿತಿಯನ್ನು ರಚಿಸಬೇಕು. ಪ್ರಾರಂಭಿಕ ಬದಲಾವಣೆಗಳನ್ನು ಸಮಗ್ರ ಸಂಸ್ಥೆಗೆ ಅನ್ವಯಿಸುವ ಮುನ್ನ, ಮೊದಲು ಈ ಸಮಿತಿಯ ಮಟ್ಟಕ್ಕೆ ಅನ್ವಯಿಸಿ ನೋಡಬಹುದು. ನೀವು ಯಾವುದೇ ವಿಧಾನದಲ್ಲಿ ಮುಂದುವರಿದರೂ ವಿಷಯವನ್ನು ಮೊದಲು ಪರಿಚಯಿಸಲು ಹಾಗೂ ವಿಭಿನ್ನತೆ, ಸಮಾನತೆ ಹಾಗೂ ಭೇದರಾಹಿತ್ಯಗಳ ಕಲ್ಪನೆಯನ್ನು ಮನಮುಟ್ಟಿಸಲು, ನಿಮಗೆ ಕೆಲವು ಸಾಧನಗಳು ಬೇಕಾಗುತ್ತವೆ.

**ಸಂಪನ್ಮೂಲ ೧** - ಎಲ್ಲರನ್ನು ಒಳಗೊಳ್ಳುವುದು ಎನ್ನುವುದು ನಿಮ್ಮ ಸಹೋದ್ಯೋಗಿಗಳೊಡನೆ ಹಂಚಿಕೊಳ್ಳಲು ಸುಲಭವೆನಿಸಬಹುದು.

Video: Involving all

ಶಿಕ್ಷಣದಲ್ಲಿ ಭೇದರಾಹಿತ್ಯವನ್ನು ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕವಾದ ನಾಲ್ಕು ಆಯಾಮಗಳನ್ನು ಗುರುತಿಸಿವೆ:

1. ಅವಕಾಶ (Access) : ಶಾಲೆಗೆ ಬರದಿರಲು ಕಾರಣಗಳಿದ್ದಾಗ: ಅಂಗವೈಕಲ್ಯವೋ ಆರೋಗ್ಯದ ಸ್ಥಿತಿಯೋ ಬಡತನವೋ (ಸಮವಸ್ತ್ರ ಖರೀದಿಗೆ ಹಾಗೂ ಶಾಲಾ ಶುಲ್ಕ ಕಟ್ಟಲು ಹಣದ ಕೊರತೆ ಅಥವಾ ಕುಟುಂಬಕ್ಕಾಗಿ ದುಡಿಯಬೇಕಾದ ಪರಿಸ್ಥಿತಿ, ಅಥವಾ ಮನೆಯಲ್ಲಿ ಅಧ್ಯಯನಕ್ಕೆ ಸ್ಥಳವಿಲ್ಲದಿರುವುದು, ಸ್ಥಳ(ಶಾಲೆಯಿಂದ ಬಹುದೂರ ಪಯಣಿಸಬೇಕಾದ ಕಷ್ಟ, ಹಾಗೂ ಆ ವಯಸ್ಸಿಗೆ ಅದು ಅಪಾಯಕರವೂ ಆಗಿರಬಹುದು), ಮನೆತನದ ಜವಾಬ್ದಾರಿಗಳು, ಅಥವಾ ಸಾಂಪ್ರದಾಯಿಕ ಕಾರಣಗಳಿಂದ ಶಿಕ್ಷಣಕ್ಕೆ ಮಹತ್ವ ಕೊಡದಿರುವ ಹಿನ್ನಲೆ, ಇತ್ಯಾದಿ)
2. ಸ್ವೀಕಾರ : ಶಾಲೆ ಸೇರಿದ ಮೇಲೆ ಮಕ್ಕಳಿಗೆ ಶಿಕ್ಷಕರ ದೃಷ್ಟಿಕೋನದಲ್ಲಿ ಸಿಗುವ 'ಸ್ಥಾನಮಾನ'. ಕಲಿಯುವ ಎಲ್ಲ ಮಕ್ಕಳು ಸ್ವತಂತ್ರ ವ್ಯಕ್ತಿತ್ವಗಳಾಗಿದ್ದು, ಯಾವುದೇ ಹಿನ್ನಲೆಯಿಂದ ಬಂದಿದ್ದರೂ ಯಶಸ್ಸನ್ನು ಸಾಧಿಸಹುದು ಎನ್ನುವ ನಿರೀಕ್ಷೆ ಶಿಕ್ಷಕರಲ್ಲಿರಬೇಕು.
3. ಭಾಗವಹಿಸುವಿಕೆ : ಕಲಿಕೆ ಎನ್ನುವುದು ಒಂದು ಬಹಿರಂಗದ ಚಟುವಟಿಕೆಯೂ ಆಗಿದೆ. ನಾವು ಇತರರೊಂದಿಗೆ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಹಂಚಿಕೊಳ್ಳುತ್ತ ವಿನಿಮಯಮಾಡಿಕೊಳ್ಳುತ್ತ ಜ್ಞಾನವು ವರ್ಧಿಸುತ್ತದೆ. ಕಲಿಯುವವರೆಲ್ಲ ಪರಸ್ಪರರೊಡನೆ ಬೆರೆಯಲು ಹಾಗೂ ಶಿಕ್ಷಕರೊಡನೆ ವಿನಿಮಯ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಬೇಕು.
4. ಸಾಧನೆ : ಭೇದರಾಹಿತ್ಯ ಎಂದಾಕ್ಷಣ ಎಲ್ಲರೂ ಒಂದೇ ಮಟ್ಟದ ಸಾಧನೆ ಮಾಡಬಲ್ಲರು ಎಂದರ್ಥವಲ್ಲ. ಆದರೆ ಕಲಿಯುತ್ತಿರುವ ಎಲ್ಲರೂ ಒಂದೇ ಬಗೆಯ ನಿರ್ದಿಷ್ಟ ರಾಷ್ಟ್ರೀಯ ಪರೀಕ್ಷೆಯನ್ನಷ್ಟೇ ದಾಟಬೇಕು ಎಂದಲ್ಲ. ಆದರೆ ಬೇರೆ ಬೇರೆ ಹಿನ್ನಲೆಗಳಲ್ಲಿ ತಮ್ಮ ತಮ್ಮ ಶೈಕ್ಷಣಿಕ ಪ್ರಗತಿಯನ್ನು ನಿದರ್ಶಿಸಲು ಅವಕಾಶವನ್ನು ಪಡೆದಿರಬೇಕು ಎಂದರ್ಥ.
5. ವಿದ್ಯಾರ್ಥಿಗಳು ತಮ್ಮ ವಿವಿಧ ಪ್ರತಿಭೆಗಳನ್ನೂ ಸಾಮರ್ಥ್ಯಗಳನ್ನೂ ಜ್ಞಾನವನ್ನೂ ಪ್ರದರ್ಶಿಸಲು ಶಿಕ್ಷಕರು ಅವಕಾಶವನ್ನು ಕಲ್ಪಿಸಬೇಕು. ತನ್ಮೂಲಕ ಸಮುದಾಯದಲ್ಲಿ ಅವರಿಗೆ ಮೆಚ್ಚುಗೆ ಸಿಗುವಂತಾಗಬೇಕು.

ಚಿತ್ರ೨ ರಲ್ಲಿ ವ್ಯಕ್ತಿಗಳನ್ನೂ ಗುಂಪುಗಳನ್ನೂ ಭೇದವೆಣಿಸುವುದು ಎಷ್ಟು ಸುಲಭ ಎನ್ನುವದನ್ನು ಹಾಸ್ಯಲೇಪದೊಂದಿಗೆ ತೋರಿಸಲಾಗಿದೆ :




ಎಲ್ಲರೂ ಮೇಧಾವಿಗಳೆ. ಆದರೆ ನೀವು ಮೀನಿಗೆ ಮರವನ್ನು ಹತ್ತಲು ಸಾಧ್ಯವಿಲ್ಲ ಎನ್ನುವುದನ್ನೇ ನಿರ್ಣಾಯಕ ಪ್ರಮಾಣವನ್ನಾಗಿ ಮಾಡಿಕೊಂಡರೆ, ಮೀನು ಬದುಕಿರುವ ತನಕವೂ ತನ್ನನ್ನು ತಾನು ಅಸಮರ್ಥ ಎಂದೇ ಭಾವಿಸುತ್ತದೆ.

- ಆಲ್ಬರ್ಟ್ ಐನ್ಸ್ ಟೀನ್

.

ಚಿತ್ರ 2 : ನೀವು ಯೋಜಿಸುವ ಚಟುವಟಿಕೆಗಳು ಭೇದರಾಹಿತ್ಯವನ್ನು ಒಳಗೊಂಡಿರಬೇಕು

ಚಿತ್ರ 2 ರಲ್ಲಿ ಕಾಣುವ ಪ್ರಾಣಿಪಕ್ಷಿಗಳಂತೆ, ನಿಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳೂ ವಿಭಿನ್ನ. ಅವರ ಆ ವಿಭಿನ್ನತೆಗಳನ್ನು ಸಕಾರಾತ್ಮಕ ಭಾವದಿಂದ ಗುರುತಿಸಬೇಕು. ಒಬ್ಬರಿಗೆ ಅನುಕೂಲಕರವೂ ಮತ್ತೊಬ್ಬರಿಗೇ ಅನನುಕೂಲಕರವೂ ಆಗುವಂತಹ ಸಂದರ್ಭಗಳನ್ನು ಸೃಷ್ಟಿಸಬಾರದು. ಚಿತ್ರದಲ್ಲಿ ಸೂಚಿಸಿರುವ ಕಾರ್ಯವನ್ನು ಸಾಧಿಸಬಲ್ಲ ಪ್ರಾಣಿ ಯಾವುದು ಎನ್ನುವುದು ಸುಸ್ಪಷ್ಟ. ತರಗತಿಯ ವಿದ್ಯಾರ್ಥಿಗಳ ಪೈಕಿಯೂ ಹೀಗೆಯೇ.

ತರಗತಿಯಲ್ಲಿ ಒಂದು ಕಾರ್ಯ ಚಟುವಟಿಕೆಯನ್ನು ಯೋಜಿಸುವಾಗ, ಇದರಲ್ಲಿ ಯಾರು ಯಶಸ್ವಿಯಾಗಬಲ್ಲರು ಎನ್ನುವುದನ್ನು ಶಿಕ್ಷಕರು ಬಹುಮಟ್ಟಿಗೆ ತಿಳಿದೇ ಇರುತ್ತಾರೆ. ಕೇವಲ ಚಟುವಟಿಕೆಗಳಲ್ಲಷ್ಟೇ ಅಲ್ಲ, ಶಾಲೆಯ ಪರಿಸರವೂ ವಿದ್ಯಾರ್ಥಿಗಳಿಗೆ ಪ್ರತಿಕೂಲವೂ ಅಸಮಾನವೂ ಆಗಿರಲು ಸಾಧ್ಯ. (ಉದಾಹರಣೆಗೆ ಶೌಚಾಲಯವನನ್ನು ಬಳಸುವಾಗ). ಇಂತಹ ಸುತ್ತಮುತ್ತಲ ಕಿರಿಕಿರಿಗಳೂ ವಿದ್ಯಾರ್ಥಿಗಳಲ್ಲಿ ಒತ್ತಡವನ್ನು ತರಬಲ್ಲವು. ಈ ಕಾರಣದಿಂದಲೇ, ತಮ್ಮ ವಿಭಿನ್ನತೆ ಬಯಲಾದೀತೆಂದೇ ಶಾಲೆಗೇ ಬರದೇ ಇರಬಹುದು. ಹಾಗಾಗಿ ವಿಭಿನ್ನತೆ ಎನ್ನುವುದನ್ನು ಸಹಜ ಗುಣ ಎಂಬಂತೆ ಸರ್ವರಲ್ಲೂ ಸ್ವೀಕಾರ್ಯ ಮಾಡಬೇಕು. ತನ್ಮೂಲಕ ಅಗತ್ಯಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಪಡೆಯುವಲ್ಲಿ ಸಂಕೋಚ, ಮುಜುಗುರಗಳು ಇಲ್ಲದಂತಾಗಬೇಕು.

## ಚಟುವಟಿಕೆ ೧: ಭೇದರಾಹಿತ್ಯವನ್ನು ಅನುಷ್ಠಾನಕ್ಕೆ ತರುವ ವಿಷಯದ ಬಗ್ಗೆ ಸಂಭಾಷಣೆಯನ್ನು ಪ್ರಾರಂಭಿಸುವುದು:

Artiles et al.'s dimensions of inclusion ಮತ್ತು ಚಿತ್ರ ೨ ನ್ನು ಗಮನಿಸಿ. ನಿಮ್ಮ ಶಾಲೆಯಲ್ಲಿ ಭೇದರಾಹಿತ್ಯವನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿ, ನಿಮ್ಮ ಸಿಬ್ಬಂದಿಯೊಂದಿಗೆ ಚರ್ಚಿಸಲು ಈ ಸಂಪನ್ಮೂಲಗಳನ್ನು ಹೇಗೆ ಬಳಸಬಹುದು? ಚರ್ಚೆಗೆ ಇವು ಯಾವ ಅವಕಾಶಗಳನ್ನು ಕಲ್ಪಿಸಬಲ್ಲವು ಎನ್ನುವುದನ್ನು ಆಲೋಚಿಸಿ :

- ನಿಮ್ಮ ಶಾಲೆಯ ಹಿನ್ನಲೆ
- ನಿರ್ದಿಷ್ಟ ವಿಷಯಗಳ ಮೇಲಿನ ಪ್ರಭಾವ
- ಕಲಿಕೆ ಹಾಗೂ ಕಲಿಸುವ ವಿಧಾನಗಳ ಮೇಲಿನ ಪ್ರಭಾವ (ಮೌಲ್ಯಮಾಪನವನ್ನೂ ಒಳಗೊಂಡಂತೆ)

ಚರ್ಚೆ

ಆಯಾ ತರಗತಿಯ ಅಗತ್ಯವನ್ನು ಪೂರೈಸುವ ನಿಟ್ಟಿನಲ್ಲಿ, ಪ್ರತ್ಯೇಕವಾಗಿಯೂ ಔಚಿತ್ಯಪೂರ್ಣವಾಗಿಯೂ ಪ್ರಯೋಗಶೀಲವಾಗಿಯೂ ಕಲಿಕೆಗೆ ಪೂರಕವಾಗಿಯೂ ರಚಿಸಲಾದ ಶಿಕ್ಷಣವಿಧಾನವು ಭೇದರಹಿತ ಶೈಕ್ಷಣಿಕ ಪರಿಸರದ ನಿರ್ಮಾಣದ ಅವಿಭಾಜ್ಯ ಅಂಗ ಎನ್ನುವುದು ನಿಮಗೀಗಾಗಲೇ ಮನವರಿಕೆಯಾಗಿರಬಹುದು. ಉದಾಹರಣೆಗೆ- ಕೇವಲ ಮುಖ್ಯಪರೀಕ್ಷೆಯನ್ನು ಎದುರಿಸುವುದಕ್ಕಾಗಿ, ಪಠ್ಯಪುಸ್ತಕವನ್ನು ಮುಗಿಸುವುದನ್ನಷ್ಟೇ ಉದ್ದೇಶವಾಗಿಟ್ಟುಕೊಂಡು ರಚಿಸಲಾದ ಪಠ್ಯವಿಧಾನವು ಭೇದರಾಹಿತ್ಯದ ಪರಿಸರವನ್ನು ನಿರ್ಮಿಸಬಲ್ಲುದೇ ಎಂಬುದು ಪ್ರಶ್ನೆ

ಚಟುವಟಿಕೆ 1 ರಲ್ಲಿ ನೀವು ಗಮನಿಸಿರಬಹುದು, ನಿರ್ದಿಷ್ಟ ವಿಷಯಗಳು ಕೆಲವು ವಿದ್ಯಾರ್ಥಿಸಮೂಹಗಳ ವಿಷಯದಲ್ಲಿ ಭೇದರಾಹಿತ್ಯದ ವಿಚಾರಗಳನ್ನು ಹೊಂದಿರಬಹುದು. ನಿಮ್ಮ ಶಾಲೆಯ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯವನ್ನು ತಲುಪಿಸುವಲ್ಲಿ ಅಡ್ಡಿಯಾಗುತ್ತಿರುವ ಯಾವುದೋ ವಿಷಯವಿರಬಹುದು.

ಭೇದರಾಹಿತ್ಯವನ್ನು ಶಾಲೆಯ ಆವರಣದಲ್ಲೂ, ತರಗತಿಯ ಒಳಗೂ ಎಲ್ಲರ ಮನೋಭಾವದಲ್ಲೂ ವರ್ತನೆಯಲ್ಲೂ ಅನುಷ್ಠಾನಕ್ಕೆ ತರುವ ವಿಷಯವಾಗಿ ಚರ್ಚೆ ಮಾಡುವಾಗ, ನಿಮ್ಮ ಸ್ವಂತ ಭಾವನೆಗಳ ಜೊತೆಗೆ ಈ ಸಂಪನ್ಮೂಲಗಳೂ ಒಳ್ಳೆಯ ಪ್ರಾರಂಭಿಕ ವಿಚಾರವನ್ನು ಒದಗಿಸುತ್ತವೆ. ಪ್ರತಿಕೂಲ ಪರಿಸ್ಥಿತಿ ಹಾಗೂ ಭೇದಭಾವಕ್ಕೆ ಸಂಬಂಧಿಸಿದಂತೆ ನಿಮ್ಮ ಸಿಬ್ಬಂದಿಗೇ ಸ್ವಂತ ಅನುಭವಗಳು ಇರಬಹುದು. ಅವುಗಳನ್ನೂ ಇಲ್ಲಿ ಗುರುತಿಸಬಹುದು. ಸ್ವತಃ ತಮಗೆ ಅಂತಹ ಅನುಭವ ಆಗಿಲ್ಲದವರು, ಬೇರೆಯವರ ಅನುಭವಗಳನ್ನು ಕೇಳಿ, ಭಾವಿಸಿ ಸಾಂದರ್ಭಿಕವಾಗಿ ಅರ್ಥ ಮಾಡಿಕೊಳ್ಳಬಹುದು. ಸ್ವಭಾವ ಹಾಗೂ ವರ್ತನೆಗಳಲ್ಲಿ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಈ ಅನುಭವಗಳು ಪ್ರಭಾವಶಾಲೀ ಸಲಕರಣೆಗಳಾದಾವು.

ಈಗ ಚಟುವಟಿಕೆ ೨ ರನ್ನು ಮಾಡಿ ನೋಡಿ. ನಿಮ್ಮನ್ನೂ ನಿಮ್ಮ ಸಿಬ್ಬಂದಿಯನ್ನೂ ಭೇದರಾಹಿತ್ಯದ ಸಂಸ್ಕೃತಿಯನ್ನು ಅಳವಡಿಸುವಲ್ಲಿ ಇಂತಹ ಚಟುವಟಿಕೆ ಏನು ಬೆಂಬಲ ಕೊಡಬಲ್ಲುದು ಎನ್ನುವುದನ್ನೂ ಗಮನಿಸಿ.

## ಚಟುವಟಿಕೆ 2 : ಸ್ವಂತ ಅನುಭವವನ್ನು ಬಳಸುವುದು

ನಿಮ್ಮ ಅಥವಾ ನಿಮಗೆ ಪರಿಚಿತರ ಅನುಭವದಲ್ಲಿ, ಭೇದಭಾವವು (ಮತ, ಜಾತಿ, ವಿದ್ಯಾರ್ಹತೆ, ಭಾಷೆ, ಮೈಬಣ್ಣ, ಲಿಂಗ ಇತ್ಯಾದಿ) ಶಾಲೆಯ ಶೈಕ್ಷಣಿಕ ಪರಿಸರದ ಮೇಲೆ ಪ್ರಭಾವ ಬೀರಿದ ಸಂದರ್ಭವನ್ನು ನೆನಪಿಸಿಕೊಳ್ಳಿ.

ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ:

- ಅದರಿಂದಾಗಿ ನಿಮಗೆ ಹೇಗೆ ದೂರ ಉಳಿಯುವಂತಾಯಿತು?
- ಆ ಸಂದರ್ಭವನ್ನು ನೀವು ಹೇಗೆ ನಿಭಾಯಿಸಿದಿರಿ?
- ನಿಮಗೆ ಯಾವ ಬಗೆಯ ಬೆಂಬಲವು ಬೇಕೆನಿಸುತ್ತಿತ್ತು?
- ನಿಮಗೆ ಬೇಕಾದ ಬೆಂಬಲ ನಿಮಗೆ ಸಿಕ್ಕಿತೇ?
- ನಿಮ್ಮ ಶಾಲೆಯಲ್ಲಿ ಅಂತಹದೇ ಪರಿಸರವಿದ್ದಲ್ಲಿ ವಿದ್ಯಾರ್ಥಿಗಳಿಗೆ ಹೇಗೆನಿಸುತ್ತದೆ ಎನ್ನುವುದರ ಬಗ್ಗೆ ನೀವು ಗ್ರಹಿಸಿರುವ ಉತ್ತರಗಳೇನು?

ಚರ್ಚೆ :

ನಿಮ್ಮ ಹಿಂದಿನ ಜೀವನದಲ್ಲಿ ನೀವು ಹೆಚ್ಚಿನ ಭೇದವನ್ನು ಅನುಭವಿಸಿಲ್ಲದಿರಬಹುದು. ಅಥವಾ ಅಂತಹ ಅನುಭವಗಳನ್ನು 'ಭೇದ' ಎಂದೂ ಪರಿಗಣಿಸದೇ ಇದ್ದಿರಬಹುದು. ಅಥವಾ 'ಅದು ಇರುವುದೇ ಹಾಗೆ' ಎಂದು ಸುಮ್ಮನಿದ್ದಿರಬಹುದು. ಇತರರಿಗೆ ಆದ ಅನ್ಯಾಯಗಳನ್ನು ನೋಡಿಯೂ ನೀವು ಸುಮ್ಮನಿದ್ದಿರಬಹುದು, ಅಥವಾ ನೀವೂ ಭಾಗಿಯಾಗಿದ್ದಿರಬಹುದು. ಹಿಂದಿನದನ್ನು ತಿರುಗಿ ನೋಡುತ್ತ ಈ ವಿಷಯಗಳನ್ನು ಆಲೋಚಿಸುವುದರಲ್ಲಿ ನಮಗೊಂದು ಅನುಕೂಲವಿದೆ. ನಿಮಗೆ ಜುಗುಪ್ಸೆ, ಅನ್ಯಾಯ ಹಾಗೂ ಅಸಹಾಯಕತೆಗಳ ಭಾವನೆಗಳು ಮತ್ತೆ ಮೂಡಿಬರಬಹುದು. ಅನ್ಯಾಯ ಎಂದು ಅರ್ಥವಾದರೂ ಅದನ್ನು ಪ್ರತಿಭಟಿಸುವ ಅಧಿಕೃತತೆ ವಿದ್ಯಾರ್ಥಿ ದೆಸೆಯಲ್ಲಿ ಬರುವುದು ಕಷ್ಟ. ನಿಮಗೆ ಆದ ಅವಮಾನ ಅಥವಾ ನಿರ್ಲಕ್ಷ್ಯಕ್ಕೆ ನೀವು ಕುಗ್ಗಿ ಹೋಗಿರಬಹುದು. ತನ್ನ ವರ್ತನೆಯಲ್ಲಿ ಹೆಚ್ಚು ಸಮಾನತೆಯನ್ನು ವ್ಯಕ್ತಪಡಿಸಿದ ಮತ್ತೊಬ್ಬರು ಶಿಕ್ಷಕರೊಬ್ಬರೂ ಇದ್ದಿರಬಹುದು. ಅವರ ಪಾಠಗಳಲ್ಲಿ ನಿಮಗೆ ಮತ್ತೆಮತ್ತೆ ಪ್ರಯತ್ನಿಸುವಂತೆ ಸ್ಫೂರ್ತಿ ಹಾಗೂ ಹಿತ ಸಿಕ್ಕಿರಬಹುದು. ಅಥವಾ ಅದು ನಿಮ್ಮ ಪರಿವಾರದಿಂದಲೇ ಸಿಕ್ಕಿರಬಹುದು. ನೀವು ಮಾಡುವ ಕಾರ್ಯದಲ್ಲಿ ಆಸಕ್ತಿಯನ್ನೇ ತೋರದಿರುವ ಶಾಲೆಯ ಪರಿಸರದಲ್ಲಿ ಕಲಿಯುವ ಅನುಭವ ಕಷ್ಟಕರ ಎನಿಸೀತು. ಕಾಲಾಂತರದಲ್ಲಿ ಇದು ನಿಮ್ಮ ಸಾಫಲ್ಯದ ಮೇಲೂ ಪ್ರಭಾವಬೀರುತ್ತದೆ.

ಶಾಲೆಯಲ್ಲಿ ಭೇದಭಾವ ಎನ್ನುವುದು ಬೇರೆ ಬೇರೆ ಹಂತಗಳಲ್ಲಿ ನಡೆಯುತ್ತಿರುವುದನ್ನು ಶಾಲೆಯ ಶಿಕ್ಷಕರೂ, ಮುಖಂಡರೂ ಗಮನಿಸಿರಬೇಕು. ಮನುಷ್ಯರ ವ್ಯಕ್ತ ಅಥವಾ ಸುಪ್ತ ಮನಸ್ಸಿನಿಂದ ವೈಯಕ್ತಿಕ ಭೇದಭಾವಗಳು ಹೊಮ್ಮುತ್ತಿರಬಹುದು. ಉದಾಹರಣೆಗೆ- ಒಬ್ಬ ವಿದ್ಯಾರ್ಥಿಗೆ ಅರ್ಹತೆಯಿದ್ದರೂ, ಶಾಲೆಯ ಕ್ರಿಕೆಟ್ ತಂಡಕ್ಕೆ ಸೇರಿಸದೇ ಇರಬಹುದು. ಏಕೆಂದರೆ ಆ ಶಿಕ್ಷಕರಿಗೆ ತನ್ನ ಹಳ್ಳಿಯ ವಿದ್ಯಾರ್ಥಿ ಆ ತಂಡದಲ್ಲಿರುವುದು ಇಷ್ಟವಿಲ್ಲದಿರಬಹುದು. 'ಇತರ ಹುಡುಗರಿಗೂ ಅದೇ ಭಾವನೆ ಇದೆ' ಎಂಬ ಧೋರಣೆಯ್ ಇರಬಹುದು.

ಆದರೆ ಶಾಲೆಯ ಸಂಸ್ಕೃತಿಯ ಮೇಲೆ ದೊಡ್ಡ ಪ್ರಭಾವವನ್ನೇ ಬೀರಬಲ್ಲಂತಹ, ಇನ್ನೂ ಆಳವೂ ಗೋಪ್ಯವೂ ಆದ ಭೇದಭಾವವೂ ಇರಲು ಸಾಧ್ಯವಿದೆ. ಸಾಮಾನ್ಯವಾಗಿ ಸಂಸ್ಥೆಗಳಲ್ಲಿನ ಭೇದಭಾವವನ್ನು ಯಾರೂ ಪ್ರಶ್ನಿಸುವುದೇ ಇಲ್ಲ, ಅದರಲ್ಲೂ ಅದೇ ಮಾಮೂಲಿ ಪದ್ಧತಿಯಾಗಿಬಿಟ್ಟಿದ್ದಾಗ. ಉದಾಹರಣೆಗೆ - 'ಹೆಣ್ಣುಮಕ್ಕಳು ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ನಿಪುಣರಲ್ಲ' ಎನ್ನುವ ವ್ಯಾಪಕವಾದ ನಂಬಿಕೆ. ಇದು ನಿರಾಧಾರ ಎಂದು ಗೊತ್ತಿದ್ದರೂ, ಪ್ರಾರಂಭಿಕ ಹಂತಕ್ಕಿಂತ ಮುಂದೆ ಈ ವಿಷಯಗಳಲ್ಲಿ ಹೆಣ್ಣುಮಕ್ಕಳು ಮುಂದುವರೆಸುವುದು ಬೇಡ' ಎಂದು ನಿರುತ್ಸಾಹ ಗೊಳಿಸುತ್ತಾರೆ. ಮತ್ತೊಂದು ಉದಾಹರಣೆಯನ್ನು ಕೊಡಬಹುದಾದರೆ- 'ಯಾವುದೋ ಒಂದು ಸಾಂಪ್ರದಾಯಿಕ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ನಿರ್ದಿಷ್ಟ ದೈಹಿಕ ಕಾರ್ಯಗಳಿಗೆ ಮಾತ್ರ ಅರ್ಹರು. ಸಾಹಿತ್ಯ-ಲಲಿತಕಲೆಗಳಲ್ಲಿ ನಿಪುಣರಾಗಲಾರರು' ಎನ್ನುವ ಭಾವನೆ. ಈ ಕಾರಣದಿಂದಾಗಿ ಈ ಪಂಗಡಗಳಲ್ಲಿ ಇರಬಹುದಾದ ಕವಿ-ಕಲಾವಿದರುಗಳು ಗುರುತಿಗೇ ಬಾರದೇ ಪೋಷಣೆಯಿಲ್ಲದೆ ಉಳಿದಾರು. ಇದೆಲ್ಲ ಹೇಗೂ ನಡೆದುಕೊಂಡುಹೋಗುತ್ತಿದೆ ಎನ್ನುವ ಕಾರಣಕ್ಕಾಗಿ 'ಅದೇ ಸರಿ' ಎಂದು ಒಪ್ಪಿ ಸುಮ್ಮನಿರುವುದು, ಏನನ್ನೂ ಬದಲಾಯಿಸದಿರುವುದು- ಇವೇ ಸಂಸ್ಥೆಗಳಲ್ಲಿನ ಭೇದಭಾವಗಳಿಗೆ ಆಧಾರ.

ಮುಖಂಡರಾದ ನೀವು ಸಂಸ್ಥೆಯಲ್ಲಿನ ಭೇದಭಾವಗಳನ್ನು ಗುರುತಿಸಿ ತಡೆಗಟ್ಟಬೇಕು. ನಿಮ್ಮ ಎಲ್ಲ ವಿದ್ಯಾರ್ಥಿಗಳಿಗೂ ಕಲಿಕೆಯ ಪರಿಣಾಮದಲ್ಲಿ ಸಮಾನತೆ ದಕ್ಕುವಂತೆ ನೋಡಿಕೊಳ್ಳಬೇಕು. ಪ್ರಚಲಿತದಲ್ಲಿರುವ 'ನಿಯಮ'ಗಳನ್ನು ಬದಲಾಯಿಸುವುದು ತುಂಬ ಕಷ್ಟ. ವಿಷಯಗಳ ಬಗ್ಗೆ ವಿಭಿನ್ನವಾಗಿ ಆಲೋಚನೆ ಮಾಡಿ, ಅದಕ್ಕೆ ಸೂಕ್ತ ಆಧಾರಗಳು ನಿಮಲ್ಲಿವೆಯೇ ಎಂದು ನೀವೇ ನೋಡಿಕೊಳ್ಳಿ. ಉದಾಹರಣೆಗೆ, 'ಹೆಣ್ಣುಮಕ್ಕಳು

ಗಣಿತದಲ್ಲಿ ನಿಪುಣರಲ್ಲ' ಎನ್ನುವ ತಪ್ಪುಕಲ್ಪನೆಯನ್ನೇ ತೆಗೆದುಕೊಳ್ಳಿ, ನಿಮ್ಮನ್ನೇ ನೀವು ಕೇಳಿಕೊಳ್ಳಿ : ಯಾವುದನ್ನು ಓದಿ ನನಗೆ ಈ ಭಾವನೆ ಬಂತು? ನನಗೆ ಯಾರಾದರೂ ಮಹಿಳಾ ಗಣಿತಜ್ಞರು ಗೊತ್ತಿರುವರೆ? ಉನ್ನತ ಮಟ್ಟದ ಗಣಿತವನ್ನು ಅಧ್ಯಯನ ಮಾಡಲು ಹೆಣ್ಣುಮಕ್ಕಳಿಗೆ ಅವಕಾಶಗಳನ್ನೇ ಕೊಡದೇ ಇದ್ದರೆ, ಅವರು ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸುವುದಾದರೂ ಹೇಗೆ?

## ಚಟುವಟಿಕೆ 3 : ಶಿಕ್ಷಣ, ಹೊಸದಾದ ಜೀವನಕ್ಕೊಂದು ದಾರಿ

Wikipedia ದಲ್ಲಿಂದ ಆಯ್ದುಕೊಂಡ, ಭಾರತದ ೧೧ನೆಯ ರಾಷ್ಟ್ರಪತಿ A.P.J. Kalam ಅವರ ಕುರಿತಾದ ಸಂಗ್ರಹ ಇಲ್ಲಿದೆ. ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ದುರ್ಬಲವಾಗಿದ್ದ ಒಂದು ಕುಟುಂಬದಿಂದ ಬಂದ ಅವರು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದ್ದು ಹೇಗೆ ಎಂದು ಆಲೋಚಿಸಿ. ವಿದ್ಯಾಭ್ಯಾಸ ಮಾಡುವುದೂ ಅವರಿಗೆ ಸುಲಭವಾಗಿರಲಿಲ್ಲ. ಅವರು ಸದಾ ಸಾಫಲ್ಯವನ್ನೇ ಪಡೆಯಲಿಲ್ಲ. ಆದರೂ ಆತ್ಮವಿಶ್ವಾಸ ಮತ್ತು ದೃಢತೆಯನ್ನು ಮೆರೆದರು. ಆವುಲ್ ಪಕಿರ್ ಜೈನುಲಬ್ದೀನ್ ಅಬ್ದುಲ್ ಕಲಾಂ (೧೫ ಅಕ್ಟೋಬರ್ ೧೯೩೧ ರಲ್ಲಿ ಜನ್ಮ)ರವರು Dr. A.P.J. ಅಬ್ದುಲ ಕಲಾಂ ಎಂದೇ ಹೆಚ್ಚು ಪ್ರಸಿದ್ಧ. ವಿಜ್ಞಾನಿಯೂ ಆಡಳಿತಗಾರರೂ ಆಗಿದ್ದು ೨೦೦೨ ರಿಂದ ೨೦೦೭ರವರೆಗೆ ಭಾರತದೇಶದ ರಾಷ್ಟ್ರಪತಿಯೂ ಆದರು.

೧೫ನೆ ಅಕ್ಟೋಬರ್ ೧೯೩೧ರಲ್ಲಿ ತಮಿಳುನಾಡಿನ ರಾಮೇಶ್ವರದಲ್ಲಿ ಮುಸಲ್ಮಾನ ಕುಟುಂಬದಲ್ಲಿ ಜನಿಸಿದ ಇವರ ತಂದೆ ಜೈನುಲಬ್ದೀನರು ದೋಣಿ ಚಾಲಕರು. ಇವರ ತಾಯಿ ಆಶಿಯಮ್ಮಾ ಗೃಹಿಣಿ. ಬಡ ಕುಟುಂಬದಲ್ಲಿ ಹುಟ್ಟಿಬಂದ ಇವರು ಕುಟುಂಬಕ್ಕೆ ಸಹಕಾರ ಕೊಡುವುದಕ್ಕಾಗಿ ಚಿಕ್ಕ ವಯಸ್ಸಿನಿಂದಲೇ ಉದ್ಯೋಗ ಮಾಡಲಾರಂಭಿಸಿದರು. ಶಾಲೆ ಮುಗಿದ ಬಳಿಕ ವೃತ್ತಪತ್ರಿಕೆಗಳನ್ನು ಹಂಚುವ ಕೆಲಸ ಮಾಡುತ್ತ ಅವರ ತಂದೆಗೆ ಆರ್ಥಿಕ ನೆರವು ನೀಡುತ್ತಿದ್ದರು. ಶಾಲ ದಿನಗಳಲ್ಲಿ ಕಲಾಂರಿಗೆ ಸಾಮಾನ್ಯ ಮಟ್ಟದ ಅಂಕಗಳು ಬರುತ್ತಿದ್ದವು. ಆದರೂ ಇವರನ್ನು ಬುದ್ಧಿವಂತ ಪರಿಶ್ರಮಶೀಲ ವಿದ್ಯಾರ್ಥಿ ಎಂದೇ ವರ್ಣಿಸಲಾಗುತ್ತದೆ. ಓದಿ ಕಲಿಯುವ ಅಪಾರ ಉತ್ಸಾಹವಿದ್ದ ಇವರು ಗಂಟೆಗಟ್ಟಲೇ ಓದುತ್ತಿದ್ದರಂತೆ, ಅದರಲ್ಲೂ ವಿಶೇಷವಾಗಿ ಗಣಿತವನ್ನು ಓದುತ್ತ ಕೂಡುವರಂತೆ. ರಾಮೇಶ್ವರದ ಪ್ರಾಥಮಿಕ ಶಾಲೆಯಲ್ಲಿ ಶಾಲಾಶಿಕ್ಷಣವನ್ನು ಮುಗಿಸಿದ ಇವರು ಆ ದಿನಗಳಲ್ಲಿ ಚೆನ್ನೈನ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ್ದ ತಿರುಚರಾಪಳ್ಳಿಯ ೧೯೫೪ರಲ್ಲಿ ಸೇಂಟ್ ಜೋಸೆಫ್ಸ್ ಮಹಾವಿದ್ಯಾಲಯದಲ್ಲಿ ಸ್ನಾತಕಪದವಿಯನ್ನು ಪಡೆದರು. ಆ ಪದವಿಶಿಕ್ಷಣ ಮುಗಿಯುವಷ್ಟರಲ್ಲಿ ಅವರ ಉತ್ಸಾಹ ಕುಂದಿತ್ತು. ಆ ನಾಲ್ಕು ವರ್ಷಗಳು ಅದನ್ನೇ ಓದುತ್ತ ವ್ಯರ್ಥ ಮಾಡಿದ್ದನ್ನು ಅವರು ಸದಾ ನೆನೆಯುತ್ತಾರೆ. ಆ ಬಳಿಕ ೯೫೫ರಲ್ಲಿ aerospace engineering ಅಧ್ಯಯನಕ್ಕಾಗಿ ಚೆನ್ನೈಗೆ ತೆರಳಿದರು. ತನ್ನ ಆತ್ಮಚರಿತ್ರೆಯಾದ Wings of Fire (೨೦೦೨) ರಲ್ಲಿ ಅವರು ಬರೆಯುತ್ತಾರೆ- "ನಾನು ಮತ್ತು ನನ್ನ ಸೋದರ-ಸೋದರಿಯರು ನಮ್ಮ ತಂದೆಯಿಂದ ಪ್ರಾಮಾಣಿಕತೆ ಹಾಗೂ ಶಿಸ್ತುಗಳನ್ನು ಕಲಿತೆವು, ತಾಯಿಯಿಂದ ಒಳ್ಳೆಯತನದಲ್ಲಿ ನಂಬಿಕೆ ಹಾಗೂ ದಯಾ ಗುಣಗಳನ್ನು ಕಲಿತೆವು.

ಇದನ್ನು ಓದಿದ ಮೇಲೆ ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ:

- ಈ ಗುಣಗಳೆಲ್ಲ ಎಲ್ಲಿಂದ ಬಂದವು? ಹೇಗೆ ಪೋಷಣೆಗೊಂಡವು?
- ಇಷ್ಟು ಕಷ್ಟಪಟ್ಟು ಕಲಿಯುವುದಕ್ಕೆ ಅವರಿಗೆ ಸ್ಫೂರ್ತಿ ಹಾಗೂ ಬೆಂಬಲ ಎಲ್ಲಿಂದ ಬಂದಿದ್ದಿರಬಹುದು? ಅವರ ಕುಟುಂಬ, ಸಮುದಾಯ ಹಾಗೂ ಶಾಲಾಶಿಕ್ಷಣದ ಬಗ್ಗೆ ಚಿಂತಿಸಿ.
- ನಿಮ್ಮ ಸಿಬ್ಬಂದಿ ಹಾಗೂ ವಿದ್ಯರ್ಥಿಗಳಲ್ಲಿ ಭೇದರಾಹಿತ್ಯವನ್ನೂ ಮಹತ್ವಾಕಾಂಕ್ಷೆಗಳನ್ನೂ ಹುಟ್ಟಿಸಬಲ್ಲಂತಹ ಇನ್ನೂ ಬೇರೆ ಪ್ರಸಂಗಗಳು ಇವೆಯೇನು? ನಿಮ್ಮ ಶಾಲೆಯನ್ನು ಬಿಟ್ಟು ಇನ್ನೂ ಮುಂದೆ ಹೋಗಿ- ಅನ್ಯಾನ್ಯ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿರುವ ಬೇರೆ ಬೇರೆ ಹಿನ್ನಲೆಯ ವಿದ್ಯಾರ್ಥಿಗಳನ್ನೂ ಪರಿಗಣಿಸಿ, ಅವರುಗಳು ಅಡೆತಡೆಗಳನ್ನು ಹೇಗೆ ಗೆದ್ದರು ಎನ್ನುವುಗನ್ನು ಗಣಿಸಿ. ಮನೋಭಾವ ಹಾಗೂ ವರ್ತನೆಗಳಲ್ಲಿ ಬದಲಾವಣೆಯನ್ನು ತರಲು ನೀವು ಆ ಉದಾಹರಣೆಗಳನ್ನು ಹೇಗೆ ಬಳಸಬಹುದು?

ಮೇಲಿನ ವಿಚಾರದಲ್ಲಿ ಡಾ ಕಲಾಂರವರು ತಮ್ಮ ತಾಯ್ತಂದೆಯರಿಂದ ಪಡೆದುಕೊಂಡ ಅಂಶಗಳ ಬಗ್ಗೆ ಪ್ರಸ್ತಾವವಿದೆ. ತಮ್ಮ ಸೋದರ-ಸೋದರಿಯರೂ ಅದನ್ನೆಲ್ಲ ಪಡೆದುಕೊಂಡರು ಎನ್ನುತ್ತಾರೆ. ಆದರೂ ಅವರ ಕುಟುಂಬದ ಬೇರಾರೂ ಉನ್ನತ ಶಿಕ್ಷಣ ಹಾಗೂ ಸಾಧನೆಗಳತ್ತ ಉತ್ಸಾಹ ತೋರಲಿಲ್ಲ. ತನ್ನ ತಾಯ್ತಂದೆಯರಲ್ಲದೆ, ತನ್ನ ಸಮುದಾಯದ ಜನರು ಕೆಲವರು ಇವರನ್ನು ಪ್ರೋತ್ಸಾಹಿಸಿರಬಹುದು, ಸಾಮಾನ್ಯ ಮೂಲಗಳಿಂದ ಹೊರಟು ತಮ್ಮನ್ನೆಲ್ಲ ವಿಶಾಲ ಪ್ರಪಂಚದಲ್ಲಿ ಪ್ರತಿನಿಧಿಸಬೇಕು ಎಂಬ ಭಾವನೆ ತೋರಿರಬಹುದು. ಇವರು ಮುಂದೆ ಭಾರತದ ರಾಷ್ಟ್ರಪತಿಯಾಗುತ್ತಾರೆ ಎನ್ನುವುದು ಯಾರಿಗೆ ತಾನೆ ಗೊತ್ತಿತ್ತು? ಇದಲ್ಲದೆ ಶಾಲಾಶಿಕ್ಷಣವೂ ಕಲಾಂರವರ ಜೀವನದಲ್ಲಿ ಬಹು ಮುಖ್ಯವಾದ ಪಾತ್ರ ವಹಿಸಿರಬೇಕು. ಅವರ ಸಾಮಾನ್ಯ ಹಿನ್ನಲೆಯನ್ನು ಗಣಿಸದೆ ಗೌರವ ಮತ್ತು ಪ್ರೋತ್ಸಾಹಗಳನ್ನು ತೋರಿದ ಶಿಕ್ಷಕರು ಇದ್ದಿರಬೇಕು. ಬಹುಶಃ ಆ ಶಾಲೆಯು ಎಲ್ಲ ಮಕ್ಕಳಲ್ಲೂ ಮುಂದಿನ ಸ್ತರದ ಶಿಕ್ಷಣಕ್ಕೇರುವಂತೆ, ಮಹತ್ವಾಕಾಂಕ್ಷೆಯನ್ನು ಬೆಳೆಸಿಕೊಳ್ಳುವಂತೆಯೂ ಪ್ರೋತ್ಸಾಹವಿತ್ತಿರಬೇಕು.

ಮನೋಭಾವಗಳನ್ನು ಬದಲಾಯಿಸುವಲ್ಲಿ, ಪ್ರಸಂಗಾಧ್ಯಯನಗಳು, ಅದರಲ್ಲೂ ಆಯಾ ಸಮುದಾಯಕ್ಕೆ ಸಂಬಂಧಿಸಿದಂತಹ ಪಭಾವಶಾಲೀ ಉಪಕರಣಗಳಾಗುತ್ತವೆ. ಪ್ರಸಂಗಳನ್ನು ಮುಂದಿಡುವುದು, ತರಗತಿಯಲ್ಲೋ ಚಟುವಟಿಕೆಗಳಲ್ಲೋ ಅವುಗಳನ್ನು ಬಳಸುವುದು, ತಮ್ಮ ಯಶಸ್ಸಿನ ಕಥೆಯನ್ನು ಹಂಚಿಕೊಳ್ಳಲು ಸಾಧಕರನ್ನು ಅತಿಥಿಭಾಷಣಕ್ಕಾಗಿ ಆಹ್ವಾನಿಸುವುದು, ಅವರು ಅಡೆತಡೆಗಳನ್ನು ಹೇಗೆ ಮೀರಿ ಬೆಳೆದರು ಎನ್ನುವುದನ್ನು ಚರ್ಚಿಸುವುದು, ಇಂತಹ ವ್ಯಕ್ತಿಗಳ ಕಥೆಗಳ ಮೂಲಕ ಸಿಗುವ ಸಂದೇಶಗಳನ್ನು ಚರ್ಚಿಸುವುದು- ಇತ್ಯಾದಿ ಎಲ್ಲವುಗಳು ನಿಮ್ಮ ಸಿಬ್ಬಂದಿಯನ್ನು ವಿದ್ಯಾರ್ಥಿಗಳನ್ನು ಭೇಡರಾಹಿತ್ಯದ ಕುರಿತಾಗಿ ಚರ್ಚೆಗೆ ಒಳಪಡಿಸಲು ಅನುಕೂಲಿಸುತ್ತವೆ.

# 3 ವಿದ್ಯಾರ್ಥಿಗಳ ಕಲಿಕೆಯ ಪರಿಣಾಮಗಳನ್ನು ಉತ್ತಮಗೊಳಿಸಲು ಕಾರ್ಯಕಲಾಪಗಳನ್ನು ಪ್ರಾಮುಖ್ಯತೆಗನುಗುಣವಾಗಿ ಯೋಜಿಸುವುದು

ಕಲಿಕೆಯ ಗ್ರಹಿಕೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ವಿಷಯಗಳು ತಡೆಯೊಡ್ಡಲು ಸಾಧ್ಯ- ಹಾಜರಾತಿ, ಸಮವಸ್ತ್ರವನ್ನು ಖರೀದಿಸಲು ಅಸಾಮರ್ಥ್ಯ, ಶಾಲೆಗೆ ಪಯಣಿಸಲು ಸಾಧ್ಯವಾಗದಿರುವುದು, ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು, ಇತ್ಯಾದಿ. ಅಥವಾ ಶಿಕ್ಷಕರ ಮನೋಭಾವ ವರ್ತನೆಗಳಿಂದಾಗಿ, ಅಧ್ಯಾಪನ ಶೈಲಿ, ಪಾಠ್ಯೋಪಕರಣಗಳು, ಅಥವಾ ಪಠ್ಯವಿಚಾರವನ್ನು ಅರ್ಥಪಡಿಸುವ ರೀತಿ ಇತ್ಯಾದಿಗಳು ತರಗತಿಯಲ್ಲಿಯೇ ವಿದ್ಯಾರ್ಥಿಯ ಕಲಿಕೆಯ ಉತ್ಸಾಹವನ್ನು ಪ್ರಭಾವಗೊಳಿಸುತ್ತವೆ. ತಾವು ಇತರರಿಗಿಂತ 'ವಿಭಿನ್ನ'ವಾಗಿರುವ ವಿದ್ಯಾರ್ಥಿಗಳು ಎಲ್ಲರಂತೆ ತಾವೂ ಆಗಲು ಎಷ್ಟು ಪರಿಶ್ರಮಪಡಬೇಕಾಗುತ್ತದೆ ಎನ್ನುವುದು ನಿಮಗೆ ತಿಳಿದೇ ಇದೆ- ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಬರೆಯಬೇಕಾಗುತ್ತದೆ, ನಾಲ್ಕು ಮೀಟರ್ ಗಳಿಗಿಂತ ದೂರದಿಂದ ಕೃಷ್ಣಫಲಕವನ್ನು ನೋಡಬೇಕಾಗುತ್ತದೆ ಅಥವಾ ದೀರ್ಘಕಾಲದವರೆಗೂ ಒಂದೇ ಕಡೆ ಕುಳಿತು ಆಲಿಸಬೇಕಾಗುತ್ತದೆ. ಇದೆಲ್ಲವೂ ಸೇರಿರುತ್ತದೆ.

ಈ ಎಲ್ಲ ಸಂದರ್ಭಗಳಿಗೆ ವಿದ್ಯಾರ್ಥಿಗಳು ಬಗೆಬಗೆಯಾಗಿ ಪ್ರತಿಸ್ಪಂದಿಸುತ್ತಾರೆ. ಕೆಲವರಿಗೆ ಇದೆಲ್ಲ ಸಮಸ್ಯೆಳೇ ಆಗದಿರಬಹುದು. ಇನ್ನು ಕೆಲವರಿಗೆ ಇವುಗಳೇ ಅಪಾರ ಕಷ್ಟದ ವಿಷಯಗಳಾಗಿರಬಹುದು. ಕೆಲವು ವಿದ್ಯಾರ್ಥಿಗಳಿಗೆ ಇವೆಲ್ಲ ಕಡಿಮೆ ಶ್ರಮದ ವಿಷಗಳಾದರೆ ಮತ್ತೆ ಕೆಲವರಿಗೆ ತಮಗೆ ಆಪ್ತರಾದವರು (ಸಾಮಾನ್ಯವಾಗಿ ಪೋಷಕರು ಅಥವಾ ಶಿಕ್ಷಕರು) ಸಹಾಯ ಮಾಡಬೇಕಾಗುತ್ತದೆ. 'ಈ ಕಷ್ಟಗಳು ಅನಿವಾರ್ಯ ಏನೂ ಮಾಡಲಾಗದು' ಎನ್ನುವ ಧೋರಣೆಯನ್ನು ಶಾಲೆಗಳು ಕೈಬಿಡಬೇಕಾಗಿದೆ. "ಸಮಾನತೆಯನ್ನು ಸಾಧಿಸುವ ಶಿಕ್ಷಣದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ತಮ್ಮ ಹಕ್ಕುಗಳನ್ನು ದಕ್ಕಿಸಿಕೊಳ್ಳಕು ಹಾಗೂ ಸಮಾಜಕ್ಕೂ ನ್ಯಾಯಕ್ಕೂ ಯೋಗದಾನ ಕೊಡುವುದಕ್ಕೂ ಸಾಧ್ಯವಾಗಿಸುವುದು ಅತಿಮುಖ್ಯ" ಎಂದು ಘೋಷಿಸುವುದರ ಮೂಲಕ NCF ಬದಲಾವಣೆಯ ಜವಾಬ್ದಾರಿಯನ್ನು ಶಿಕ್ಷಕರ ಹಾಗೂ ಶಿಕ್ಷಣತಜ್ಞರ ಹೆಗಲಿಗೇ ಹೊರಿಸಿದೆ. ಹೀಗಾಗಿ, ಸವಾಲುಗಳನ್ನು ಎದುರಿಸುವ ವಿದ್ಯಾರ್ಥಿಗಳು, ಅದರಲ್ಲೂ ಹೆಣ್ಣುಮಕ್ಕಳು, ಶಿಕ್ಷಣವು ಅವರನ್ನು ಸಶಕ್ತಗೊಳಿಸಿ, ಸಮುದಾಯ ಜೀವನದಲ್ಲಿ ತಮ್ಮ ಹಕ್ಕುಗಳನ್ನು ಅರಿತುಕೊಂಡು, ಸಾಮಾಜಿಕ ಭೇದಭಾವವನ್ನು ಮೀರಿನಿಂತು, ತಮ್ಮ ಸ್ವಾತಂತ್ರ್ಯ ಸಾಮರ್ಥ್ಯ ಹಾಗೂ ಸಮಾನತೆಯ ಹಕ್ಕುಗಳನ್ನು ದಕ್ಕಿಸಿಕೊಳ್ಳುವಂತೆ ಮಾಡಬೇಕು.

ನಿಮ್ಮ ಶಾಲೆಯ ಮಕ್ಕಳ ಪೈಕಿ ವಿಭಿನ್ನ ಸಮೂಹಗಳ ನಡುವಿನ ಸಂಬಂಧಗಳನ್ನೂ, ಕಲಿಕೆಯಲ್ಲಿ ಅವರಿಗೆಲ್ಲ ಒದಗುವ ಅವಕಾಶಗಳನ್ನು ಗಮನಿಸಿ ವಿಶ್ಲೇಷಿಸಬೇಕು. ಈ ಮೊದಲೇ ವಿಷಯದ ಪರಿಚಯವೂ ಅನುಭವವೂ ಇರುವ ವಿದ್ಯಾರ್ಥಿಗಳಿಗೆ ಹೇಗೆ ಕಲಿಕೆ ಸುಲಭವಾಗುತ್ತದೆ ಎನ್ನುವುದನ್ನು ಗಮನಿಸದಾಗ ಶಿಕ್ಷಣದ ಬಗ್ಗೆಗಿನ ದೃಷ್ಟಿಕೋನವೇ ಬದಲಾಯಿತು. ಉತ್ತಮ ಅಧ್ಯಾಪನ ಎಂದರೆ ಕೇವಲ ಮಾಹಿತಿಯನ್ನು ತಲುಪಿಸುವುದಷ್ಟೇ ಅಲ್ಲ, ಬದಲಾಗಿ, ಸ್ವತಃ ತಮ್ಮದೇ ವಿಧಾನಗಳಿಂದ ಕಲಿಯುವ ಪ್ರಯತ್ನ ಮಾಡಿ, ಮುಂದುವರೆಯುವಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವೀಯಬೇಕಾಗುತ್ತದೆ.

## ಚಟುವಟಿಕೆ 4 : ಶಿಕ್ಷಣದ ಸಮಾನ ಹಕ್ಕುಗಳ ಬಗ್ಗೆ ವಿಶ್ಲೇಷಣೆ

ಸರಣಿ ೧ ನ್ನು ಗಮನಿಸಿ. ಅದು ಶ್ರೀಯುತ ಶರ್ಮಾರವರ ಡೈರಿಯಿಂದ ಆಯ್ದ ಭಾಗ. ತನ್ನ ಶಾಲೆಯಲ್ಲಿನ ವಿಭಿನ್ನತೆಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳ ಪ್ರಗತಿಯನ್ನು ಅದು ಹೇಗೆ ಪ್ರಭಾವಗೊಳಿಸುತ್ತದೆ ಎನ್ನುವುದನ್ನು ಆ ಡೈರಿಯಲ್ಲಿ ಅವರು ದಾಖಲಿಸಿದ್ದಾರೆ. Artiles et al.'s dimensions. ಅನುಗುಣವಾಗಿ ವಿದ್ಯಾರ್ಥಿಗಳ ವಿಭಿನ್ನತೆಗಳ ವ್ಯಾಪ್ತಿ ಹಾಗೂ ಎಷ್ಟು ವಿದ್ಯಾರ್ಥಿಗಳು ಒಳಪಡುತ್ತಾರೆ ಹಾಗೂ ಭೇದರಾಹಿತ್ಯದ ಮೇಲೆ ಅದರ ಪ್ರಭಾವ ಏನು ಎನ್ನುವುದನ್ನು ಗಮನಿಸುವುದು ಶರ್ಮಾರವರ ಉದ್ದೇಶ. ಏಕೆಂದರೆ, ಮಕ್ಕಳು ಶಾಲೆಯಲ್ಲಿ ಮಾತ್ರವೇ ಕಲಿಯುವುದಲ್ಲದೆ, ಮನೆಗಳಲ್ಲೂ ಕಲಿಯುತ್ತಾರೆ. ಹಾಗಾಗಿ ಮನೆಯ ಪರಿಸರವು ಅವರ ಕಲಿಕೆಯ ಮೇಲೆ ಬೀರುವ ಪ್ರಭಾವವೂ ಗಣ್ಯ. ಶರ್ಮಾರವರು 'Using data on diversity to improve your school' ಎಂಬ ಪಠ್ಯಭಾಗವನ್ನು ಬಳಸಿ ತಾನು ಸಂಗ್ರಹಿಸಿದ ಮಾಹಿತಿಯನ್ನು ಸೇರಿಸಿ, ತನ್ನ ಪೂರ್ವಯೋಜನೆಯ ಬಗ್ಗೆ ವಿವರಿಸಿದರು.

ಸರಣಿ ೧ ತನ್ನ ಶಾಲೆಯಲ್ಲಿನ ಸಮಾನತೆಯ ಬಗ್ಗೆ ಶರ್ಮಾರವರ ಮಾಹಿತಿಸಂಗ್ರಹ (*'ಪರಿಶಿಷ್ಟ ಜಾತಿ / ಪರಿಷಿಷ್ಟ ಪಂಗಡ)

| ಅ | ಆ | ಇ | ಈ | ಉ |
|---|---|---|---|---|
| | ವಿಭಿನ್ನತೆಗಳ ಬಗೆಗಳು | ವಿದ್ಯಾರ್ಥಿಗಳ ಪ್ರತಿಶತ ಗಣನೆ | ಶಾಲೆಯಲ್ಲೂ ಮನೆಗಳಲ್ಲೂ ಕಲಿಕಗೆ ಸಂಬಂಧಿಸಿದ ಗ್ರಹಿಕೆ, ಸ್ವೀಕಾರ, ಭಾಗವಹಿಸುವಿಕೆ ಹಾಗೂ ಸಾಧನೆಗಳ ಅಂದಾಜು ಪ್ರತಿಶತ | ಕಾರ್ಯಕಲಾಪಗಳು, ಸಿಬ್ಬಂದಿಯೊಂದಿಗೆ ಕೂಡಿ ಮಾಡುವ ಯೋಜನೆಗಳು |
| ೧ | ಗಂಡುಮಕ್ಕಳು | ೮೦ | ೯೦ % ತಮ್ಮ ಸಂಪಾದಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವತ್ತ ಗಂಡುಮಕ್ಕಳಿಗೆ ಅವಕಾಶಗಳು ಸಿಗುತ್ತವೆ. ಅವರುಗಳು ತರಗತಿಯಲ್ಲಿ ಮುಂದಿನ ಸಾಲುಗಳಲ್ಲಿ ಕುಳಿತುಕೊಳ್ಳುತ್ತಾರೆ. ಬಹಳ ಮಂದಿ ಶಿಕ್ಷಕರಿಗೂ ಅವರ ಕಡೆ ಹೆಚ್ಚು ಒಲವು. | |
| ೨ | ಹೆಣ್ಣುಮಕ್ಕಳು | ೨೦ | ೩೦% ಹೆಣ್ಣುಮಕ್ಕಳ ಶಿಕ್ಷಣದಿಂದ ಕುಟುಂಬಕ್ಕೆ ಆರ್ಥಿಕಲಾಭ ಬಂದೀತು ಎಂದು ಅನಿಸುವುದಿಲ್ಲ. ಅವರ ಹಾಜರಾತಿ ಅಷ್ಟೇನೂ ಚೆನ್ನಾಗಿರುವುದಿಲ್ಲ, ಅವರ ಬಳಿಯಲ್ಲಿ ಕಾಗದ ಲೇಖನಿ ಮುಂತಾದ ಸಲಕರಣೆಗಳೂ ಇರುವುದಿಲ್ಲ. | |
| ೩ | ಕಲಿಯುವ ತೊಂದರೆ/ ನ್ಯೆಧಾನ್ಯ ಇರುವವರು | ೩ | ೨೦% ಇಂತಹ ಮಕ್ಕಳಿಗೆ ಕಲಿಸುವ ವಿಧಾನಗಳನ್ನು ತರಬೇತಿ ಕೊಡಲು ತಜ್ಞರ ಅಭಾವವಿದೆ. ಈ ಮಕ್ಕಳ ಈ ಕುಂದುಕೊರತೆಗಳು ಕಾಲಾಂತರದಲ್ಲಿ ಮಾತ್ರ ಗಮನಕ್ಕೆ ಬರುವುದರಿಂದ ಪೋಷಕರೂ ಮುಜುಗರ ಪಡುತ್ತಾರೆ. | |
| ೪. | ಉನ್ನತಮಟ್ಟದ ಸಾಮಾಜಿಕ- ಆರ್ಥಿಕ ಸ್ತರದವರು | ೧೫ | ೬೦% ಕುಟುಂಬಗಳು ಗೃಹಪಾಠ ಮುಂತಾದವುಗಳನ್ನು ಪಡೆಯಲು ಆರ್ಥಿಕವಾಗಿ ಸಮರ್ಥರು. ಕೆಲವು ವಿದ್ಯಾರ್ಥಿಗಳಿಗೆ ಗೊತ್ತು, ತಾವು ಹೇಗಿದ್ದರೂ ಕುಟುಂಬದ ಉದ್ಯಮವನ್ನೇ ಮುಂದುವರೆಸಬೇಕು ಎಂದು, ಹಾಗಾಗಿ ಅವರಲ್ಲಿ ಉತ್ಸಾಹವೇ ಕಡಿಮೆ. ವಿದ್ಯಾರ್ಥಿಗಳ ಬಳಿ ಪುಸ್ತಕ, ಲೇಖನಿ, ಕಾಗದ ಮುಂತಾದ ಸಾಮಗ್ರಿ ಮನೆಗಳಲ್ಲಿ ಲಭ್ಯ. ಅಂತೆಯೇ ಶ್ರವಣ ಮಾಧ್ಯಮದ ತಂತ್ರಜ್ಞಾನವೂ ಇರುತ್ತದೆ | |
| ೫ | ಕೆಳಮಟ್ಟದ ಸಾಮಾಜಿಕ ಆರ್ಥಿಕ ಸ್ಥಿತಿಗತಿಯವರು | ೮೫ | ೪೦% ಓದಲು ಬರೆಯಲು ಮನೆಯ ಬೆಂಬಲ ಕಡಿಮೆ. ಹೊಲಗಳಲ್ಲೂ ಮನೆಗಳಲ್ಲೂ ದುಡಿಯಲಿ ಎಂಬ ನಿರೀಕ್ಷೆ, ಹಾಜರಾತಿ ದುರ್ಬಲ, ತಾಯ್ತಂದೆಯರ ಭಾಗವಹಿಸುವಿಕೆ ಕಡಿಮೆ, ಪಠ್ಯೋಪಕರಣ ವಸ್ತು ಸಲಕರಣೆಗಳ ಅಭಾವ | |
| ೬. | ಅಂಗವೈಕಲ್ಯ | ೨ | ೩೦% ಅಂಗವಿಕಲರ ಶಿಕ್ಷಣ ಕುಟುಂಬ ಪೋಷಣಕ್ಕೆ ಪೂರಕವೇನಲ್ಲ ಎಂಬ ಭಾವನೆ. ಭೌತಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಇವರಿಗಾಗಿ ಯಾವ ವ್ಯವಸ್ಥೆಗಳನ್ನೂ ಮಾಡಲಾಗಿಲ್ಲ, ಶಾಲೆಗೂ ಸಮುದಾಯದ ಇತರ ಸ್ಥಳಗಳಿಗೂ ಹೋಗಿಬರುವುದು ಕಷ್ಟ. | |
| ೭. | ಮುಸಲ್ಮಾನ ವಿದ್ಯಾರ್ಥಿಗಳು | ೧೦ | ೫೦% ಶಿಕ್ಷಣಕ್ಕೆ ಮೌಲ್ಯವಿದ್ದರೂ, ಕೌಶಲ ಹಾಗೂ ಸ್ವಮತೀಯ ಶಿಕ್ಷಣದ ಜೊತೆಗೆ ಹೋಲಿಸಲಾಗುತ್ತದೆ. ಹೆಣ್ಣುಮಕ್ಕಳು ಒಳ್ಳೆಯ ಹೆಂಡತಿಯಾಗುದಕ್ಕೆ ಎಷ್ಟು ಬೇಕೋ ಅಷ್ಟು ಕಲಿತರೆ ಸಾಕು ಎಂಬ ಭಾವ | |

| | | | | |
|---|---|---|---|---|
| ೮. | ಹಿಂದು | ೬೦ | ೮೦% ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳಿಗೆ ಬೆಂಬಲ ಸಿಗಬಹುದೇನೋ | |
| ೯. | ಪರಿಷಿಷ್ಟ ಜಾತಿ/ ಪಂಗಡಗಳು | ೩೦ | ೪೦% ಮನೆಯ ಬೆಂಬಲ ಬಹಳ ಕಡಿಮೆ. ಮನೆಯಲ್ಲೂ ಹೊಲಗಳಲ್ಲೂ ದುಡಿಯಲಿ ಈನ್ನುವ ನಿರೀಕ್ಷೆ. ದೈಹಿಕಪೋಷಣೆಯ ಕೊರತೆ. ಬಲಹೀನತೆ ಹಾಗೂ ಕೀಳರಿಮೆ | |

ಶರ್ಮಾರವರ ಸರಣಿಯನ್ನು ಬಳಸಿಕೊಂಡು, ನಿಮ್ಮ ಶಾಲೆಗಾಗಿಯೂ ಇಂತಹದ್ದೇ ಒಂದನ್ನು ನಿಮ್ಮ ಕಲಿಕೆಯ ಡೈರಿಯಲ್ಲಿ ಬರೆದಿಟ್ಟುಕೊಳ್ಳಿ. (ಅಥವಾ ಸಂಪನ್ಮೂಲ ೨ ರಲ್ಲಿನ ಪಲಕವನ್ನು ಬಳಸಿಕೊಳ್ಳಿ) ಶಾಲೆಯಲ್ಲಿ ವಿದ್ಯಾರ್ಥಿಗಳು ಯಾವ ಯಾವ ಕ್ಷೇತ್ರಗಳಲ್ಲಿ ಏನು ಅನುಭವ ಪಡೆಯುತ್ತಾರೆ, ಏನು ಪ್ರಗತಿ ಸಾಧಿಸುತ್ತಿದ್ದಾರೆ ಎನ್ನುವುದನ್ನು ವಿಶ್ಲೇಷಣೆ ಮಾಡುವ ಈ ಚಟುವಟಿಕೆಯಲ್ಲಿ ನಿಮ್ಮ ಸಿಬ್ಬಂದಿಯೊಂದಿಗೆ ಚರ್ಚಿಸಲು ಈ ಮಾಹಿತಿ ಸಹಾಯಕವಾಗಬಹುದು.

ನಿಮ್ಮಶಾಲೆಯಲ್ಲಿ ನೀವು ಸಂಗ್ರಹಿಸಿದ ಅಥವಾ Using data on diversity to improve your school ಎಂಬ ಪಠ್ಯಭಾಗದಿಂದಲೋ ಆಯ್ದ ವಿಭಿನ್ನತೆಗಳ ಬಗೆಗಳನ್ನು ಮೊದಲ column ನಲ್ಲಿ ಉಲ್ಲೇಖಿಸಿ. ನಿಮಗೆ ಈ ಕೆಳಕಂಡ ಅಂಶಗಳು ಗಮನಕ್ಕೆ ಬಂದಾವು :

- ಸಾಂಪ್ರದಾಯಿಕ ಪಂಗಡ
- ಸಮೂಹ
- ಸಾಮಾಜಿಕ-ಆರ್ಥಿಕ ಸ್ಥಿತಿಗತಿ
- ಜಾತಿ
- ಲಿಂಗ
- ಭಾಷೆ ಅಥವಾ ಉಪಭಾಷೆ
- ಕುಟುಂಬದ ಪಾತ್ರ ಹಾಗೂ ವಿನ್ಯಾಸ
- ಕುಟುಂಬದ ಶೈಕ್ಷಣಿಕ ಹಿನ್ನಲೆ
- ಸ್ವಾಸ್ಥ್ಯ
- ಭೌಗೋಲಿಕ ಸ್ಥಳ

Using data on diversity to improve your school ಎಂಬ ಪಠ್ಯಭಾಗವನ್ನು ನೀವು ಈಗಾಗಲೇ ಓದಿದ್ದರೆ, ಆ ಮಾಹಿತಿಯನ್ನು **'ಆ'** ಮತ್ತು **'ಇ'** ಪಟ್ಟಿಗಳಲ್ಲಿ ತುಂಬಿ, **'ಈ'** ಪಟ್ಟಿಯನ್ನು ತುಂಬಲು ಪ್ರಾರಂಭಿಸಬಹುದಿತ್ತು. ಒಂದು ಅಂದಾಜಿನಲ್ಲಿ ಚಿತ್ರಣವನ್ನೂ ಪಡೆಯಬಹುದಾಗಿತ್ತು. ಆದರೂ ಶೋಧನೆಯನ್ನು ಪೂರ್ಣವಾಗಿ ಮುಂದುವರೆಸುವ ತನಕ ಯಾವುದೇ ಆತುರದ ನಿರ್ಣಯಕ್ಕೆ ಬರದಂತೆ ಎಚ್ಚರವಹಿಸುವುದು ಒಳ್ಳೆಯದು. **'ಈ'** ಪಟ್ಟಿಯು ವಿಭಿನ್ನ ಪಂಗಡಗಳು ಕಲಿಕೆಯ ವಿಷಯದಲ್ಲಿ ಹೇಗೆ ಗ್ರಹಿಸುತ್ತವೆ, ಸ್ವೀಕರಿಸುತ್ತವೆ ಹಾಗೂ ಭಾಗವಹಿಸಿ ಸಾಧನೆಗೈಯ್ಯಬಲ್ಲವು ಎನ್ನುವುದರ ಬಗ್ಗೆ ಆಲೋಚಿಸಲು ಇದು ಅನುಕೂಲಿಸುತ್ತದೆ.

ಇದು ಕೇವಲ ಪ್ರರಂಭವಷ್ಟೆ. ನೀವು ನಿಮ್ಮ ಸಿಬ್ಬಂದಿಯೊಂದಿಗೆ ಜೊತೆಗೂಡಿ ಕಾರ್ಯಮಾಡುತ್ತ ಮಾಡುತ್ತ ಕಾಲಾಂತರದಲ್ಲಿ ಈ ವಿಚಾರಗಳನ್ನು ಗುರುತಿಸಬೇಕಾಗುತ್ತದೆ. **'ಉ'** ಪಟ್ಟಿಯು (ಶರ್ಮಾರವರ ಸರಣಿಯಲ್ಲಿ ಇನ್ನೂ ಪೂರ್ಣವಾಗಿಲ್ಲ) ಭೇದರಾಹಿತ್ಯವನ್ನು ನಿಮ್ಮ ಶಾಲೆಯಲ್ಲಿ ಅನುಷ್ಠಾನಕ್ಕೆ ತರಲು ಏನು ಹೆಜ್ಜೆಗಳನ್ನಿನ್ನಿಡಬಹುದು ಎಂಬುದನ್ನು ಆಲೋಚಿಸಲೂ ಸಹಾಯಕವಾಗುತ್ತದೆ. ಈ ಅಂತಿಮ ಪಟ್ಟಿಯಲ್ಲಿ ನಿಮ್ಮ ಗಮನಕ್ಕೆ ಬಂದ ಎಲ್ಲ ಸಮಸ್ಯೆಗಳ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಾಬಹುದು ಎನ್ನುವುದನ್ನು ಬರೆದಿಡಲು ಉಪಯೋಗವಾಗುತ್ತದೆ. ಶರ್ಮಾರವರು ಶಾಲೆಯಲ್ಲಿ ಗಮನಿಸಿದ ವಿಭಾಗಗಳು- ಪ್ರತಿಯೊಂದು ವಿಭಾಗದಲ್ಲೂ ಅವರು ಪ್ರಧಾನ ಹಾಗೂ ಕನಿಷ್ಠಾಂಶಗಳನ್ನು ಪರಿಗಣಿಸಿದರು, ತನ್ಮೂಲಕ ಒಂದು ಒಟ್ಟಾರೆ ಚಿತ್ರಣವನ್ನು ಪಡೆದರು. ಹಿಂದು ಹಾಗೂ ಮುಸಲ್ಮಾನ ಎಂಬ ಎರಡೇ ಪಂಗಡಗಳನ್ನು ಗಣಿಸಿ, ಕೆಲವು ಸಂದರ್ಭಗಳಲ್ಲಿ ಇತರ ಸಾಂಪ್ರದಾಯಿಕ ಪಂಗಡಗಳ ಬಗ್ಗೆ ಗಮನ ಹರಿಸಿದ್ದಾರೆ.

**ಚರ್ಚೆ :** ನೀವು ಶರ್ಮಾರವರ ಪಟ್ಟಿಯನ್ನು ನೋಡಿರಬಹುದು. ಆರ್ಥಿಕವಾಗಿ ಚೆನ್ನಾಗಿರುವ ಹಿಂದು ಗಂಡುಮಕ್ಕಳಿಗೆ ಕಲಿಕೆಯ ವಿಷಯವಾಗಿ ಅನುಕೂಲಗಳಿವೆ. ಇದು ನಿಮ್ಮ ಸರಣಿಯೊಂದಿಗೆ ತಾಳೆಯಾಗುತ್ತದೆಯೆ? ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಅಥವಾ ಅಲ್ಪಸಂಖ್ಯಾತರ, ಪರಿಶಿಷ್ಠ ಜಾತಿಪಂಗಡಗಳ ಹೆಣ್ಣುಮಕ್ಕಳಿಗೆ

ಅವಕಾಶಗಳು ಕಡಿಮೆ. ಆ ಹೆಣ್ಣುಮಗುವಿಗೇನಾದರೂ ಅಂಗವೈಕಲ್ಯವಿದ್ದರಂತೂ ಶಾಲೆಗೇ ಹೋಗುವುದು ಕಷ್ಟ. ಇದರಿಂದಾಗಿ ಅವಳ ಕೊರತೆಗಳು ದ್ವಿಗುಣಿತವಾಗುತ್ತವೆ. ಹೀಗೆ ಒಂದಕ್ಕಿಂತ ಹೆಚ್ಚಿನ ವಿಭಾಗಗಳಿಗೆ ಸೇರುವ ವಿದ್ಯಾರ್ಥಿಗಳ ಬಗ್ಗೆ ನೀವು ಗಮನಹರಿಸಬೇಕು.

ಶರ್ಮಾರವರು ಕೇವಲ ಅನುಕೂಲವಿರುವ ವರ್ಗಗಳ ಬಗ್ಗೆಯೇ ನಿರ್ದಿಷ್ಟ ಗಮನಹರಿಯಿಸಬೇಕಾಗಿಲ್ಲ ಎಂಬ ಸಣ್ಣ ವಿಷಯವನ್ನು ಮರೆತಂತಿದೆ. ವಸ್ತುತಃ ಆ ವರ್ಗದಲ್ಲೂ (ಸಾಮಾಜಿಕ-ಆರ್ಥಿಕ ಸ್ಥಿಯಿಗತಿ ಚೆನ್ನಾಗಿರುವವರ) ಕಲಿಕೆಯ ಉತ್ಸಾಹದ ಕಡೆಗೆ ಅವರ ಗಮನ. ಸಹಜವಾಗಿಯೇ ಯಾವುದೇ ವಿದ್ಯಾರ್ಥಿಗಳೂ ಕಲಿಕೆಯ ಉತ್ಸಾಹ ತೋರದಿರುವುದು ಶಿಕ್ಷಕರಿಗೆ ಚಿಂತೆಯ ವಿಷಯವೇ. ಜೊತೆಗೆ, ಕೆಲವು ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚಿನ ವಿಭಾಗಗಳಿಗೂ ಸೇರುತ್ತಾರೆ ಎನ್ನುವ ವಿಷಯವನ್ನು ಅವರ ಸರಣಿಯು ಪ್ರತಿನಿಧಿಸಿಲ್ಲ. ಹೇಗಂದರೆ, ಕೇವಲ ಹೆಣ್ಣುಮಕ್ಕಳದೇ ವಿಭಾಗ ಮಾಡಿದರೂ, ಅದರಲ್ಲೂ ಅವರವರ ಮತದ ಹಿನ್ನಲೆಯು ಬೇರೆ ಬೇರೆಯಾಗಿರಲು ಸಾಧ್ಯ. ಆದ್ದರಿಂದ ಆ ವಿಭಾಗವೂ ಇನ್ನೂ ಸಂಕೀರ್ಣವಾಗುತ್ತದೆ. ಹಾಗಾಗಿ, ಗುಂಪಿನಲ್ಲೂ ವ್ಯಕ್ತಿಗಳನ್ನು ಪ್ರತ್ಯೇಕವಾಗಿ ಗಮನಿಸಿ, ಅವರ ಕಲಿಕೆಯ ಸ್ಥಿತಿಗತಿ ಏನು ಎಂಬುದನ್ನೂ ಪ್ರತ್ಯೇಕವಾಗಿ ಶೋಧಿಸಬೇಕಾಗುತ್ತದೆ.

ವಿದ್ಯಾರ್ಥಿಗಳ ಕಲಿಕೆಯ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರುವಂತಹ ಪ್ರಧಾನವಾದ ಎರಡು/ಮೂರು ವಿಷಯಗಳಿರಬಹುದು. ಅವುಗಳೇ ನಿಮ್ಮ ಪ್ರಾಮುಖ್ಯತೆಯ ಕ್ಷೇತ್ರಗಳೂ ಆಗಬಲ್ಲವು. Using data on diversity to improve your school ಎಂಬ ಪಠ್ಯಭಾಗದಲ್ಲಿ ನೀವು ಇದನ್ನು ಈಗಾಗಲೇ ಓದಿದ್ದಿರಬಹುದು. ನಿಮ್ಮ ಸಿಬ್ಬಂದಿಯೊಂದಿಗೆ ಕೂಡಿ ಯೋಜನೆ ಹೂಡುವ ಕಾರ್ಯದಲ್ಲಿ ತೊಡಗಿಯೂ ಇರಬಹುದು. ಆದರೆ ಪ್ರತಿಯೊಂದು ಕೆಲಸವೂ ದೊಡ್ಡದೇ ಆಗಿರಬೇಕು ಎಂದೇನಿಲ್ಲ. ಮೊದಮೊದಲು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡುತ್ತ ಸಾಗಬಹುದು. ಉದಾಹರಣೆಗೆ; ತರಗತಿಯಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ.

ನೀವು ನಿಮ್ಮ ಸಿಬ್ಬಂದಿಯೊಂದಿಗೆ ಕೂಡಿ ಕಾರ್ಯವೆಸಗಲು ಪ್ರಾರಂಭಿಸಬೇಕಾದರೆ ಮೊದಲು ಮಾಹಿತಿ ಹಾಗೂ ಪ್ರಾಮುಖ್ಯತೆಗಳ ಕ್ಷೇತ್ರಗಳನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ತನ್ಮೂಲಕ ಪಠ್ಯಾಂಶ, ಶಿಕ್ಷಣ ವಿಧಾನಗಳು, ಸಹಾಯಕ ವ್ಯವಸ್ಥೆಗಳು ಅಥವಾ ವಿದ್ಯಾರ್ಥಿಗಳೂ, ಶಿಕ್ಷಕರೂ ಹಾಗೂ ಇತರ ಹಿರಿಯರೂ ವರ್ತಿಸುವ ರೀತಿಗಳನ್ನೂ ಕಲಿಕೆಗೆ ಪೂರಕವಾದ ಪರಿಸರವನ್ನಾಗಿ ರೂಪಿಸಲು ಸಾಧ್ಯ.

# 4. ಭೇದರಾಹಿತ್ಯದ ಪರಿಸರವನ್ನು ನಿರ್ಮಿಸುವಲ್ಲಿ ಇತರರೊಂದಿಗೆ ಕೂಡಿ ಯೋಜನೆ ಹೂಡುವುದು

ಭೇದರಾಹಿತ್ಯದ ಮನೋಭಾವ, ವರ್ತನೆ ಹಾಗೂ ವ್ಯವಸ್ಥೆಗಳನ್ನು ಬದಲಾಯಿಸಲು ಸಮಯ ಬೇಕಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಗೆ ಅದು ಹೇಗೆ ಪೂರಕ ಎನ್ನುವುದರ ಕಡೆಗೇ ನಿಯಮಿತವಾಗಿ ಗಮನ ಹರಿಸಬೇಕಾಗುತ್ತದೆ. ಮುಖಂಡರಾಗಿ ನೀವು ಸ್ವತಃ ನಿಮ್ಮ ದೃಷ್ಟಿಕೋನದಲ್ಲೂ ಭೇದರಾಹಿತ್ಯದ ಭಾವವನ್ನು ಸೂಸುವುದರ ಮೂಲಕ , ಇತರರ ಮನೋಭಾವ ಹಾಗೂ ವರ್ತನೆಗಳ ಬದಲಾವಣೆಗೆ ಆದರ್ಶಪ್ರಾಯರಾಗಬೇಕಾಗುತ್ತದೆ. ಆದರೆ ನಿಮ್ಮ ಸಿಬ್ಬಂದಿಯೂ ಹಾಗೆ ಮಾಡುವಂತೆ ಮಾಡಬೇಕಾದರೆ ವೈಯಕ್ತಿಕ ನೆಲೆಯಲ್ಲಿ ಅವರಲ್ಲಿ ಆ ಭೇದರಾಹಿತ್ಯದ ಬಗ್ಗೆ ಆಲೋಚಿಸುವ, ಬೇರೆಯವರ ಅಭಿಪ್ರಾಯಗಳನ್ನೂ ಪರಿಗಣಿಸುವ ಹಾಗೂ ವಿನಿಮಯಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ.

ಇಡಿ ಶಾಲೆಯಲ್ಲಿ ಭೇದರಾಹಿತ್ಯದ ಸಂಸ್ಕೃತಿ ಸತತವಾಗಿ ಪಸರಿಸಬೇಕು. ತನ್ಮೂಲಕ ವಿದ್ಯಾರ್ಥಿಗಳ ಪಾಲಿಗೆ ಎಲ್ಲ ಕಡೆಯಿಂದಲೂ ಅದೇ ಅನುಭವಕ್ಕೆ ಬರುವಂತಾಗಬೇಲು, ಆಗ ಕಲಿಕೆಯ ಪರಿಣಾಮಗಳು ಉತ್ತಮವಾಗಲು ಸಾಧ್ಯ. ಹಾಗಾಗಿ ಸಿಬ್ಬಂದಿಯ ಪೈಕಿ ಎಲ್ಲರೂ ಈ ಕೆಲಸಕ್ಕಾಗಿ ಕೈಜೋಡಿಸುವುದೂ ಯೋಜನೆಯಲ್ಲಿ ತೊಡಗುವುದೂ ಮುಖ್ಯವಾಗುತ್ತದೆ.

ಈಗ ಶ್ರೀಮತಿ ಮೆನನ್ ರವರ ಕುರಿತಾದ ಪ್ರಸಂಗವನ್ನು ಓದಿ. ತನ್ನ ಶಾಲೆಯಲ್ಲಿ ಭೇದಭಾವ, ವಿಭಿನ್ನತೆಗಳನ್ನು ಹದ್ದಿಕ್ಕಲು, ಭೇದರಾಹಿತ್ಯವನ್ನು ಅನುಷ್ಠಾನಕ್ಕೆ ತರಲು ಆಕೆ ಬಲ ಪ್ರಯೋಗವನ್ನೇ ಮಾಡಬೇಕಾಗಿ ಬಂದದ್ದನ್ನು ನೋಡಿ:

## ಪ್ರಸಂಗಾಧ್ಯಯನ 1 : ಶ್ರೀಮತಿ ಮೆನನ್ ರವರ ಸಿಬ್ಬಂದಿ ಸಮಾಲೋಚನೆ (meeting)

ಒಂದು ಪ್ರಾಥಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಮೆನನ್ ರವರಿಗೆ 'ಆರ್ಥಿಕವಾಗಿ ಕೆಳಮಟ್ಟದವರಿಗಾಗಿ ಶಾಲೆಯಲ್ಲಿ ಶೇಖಡ ೨೫%

ಮೀಸಲಾತಿ ಮಾಡಬೇಕು' ಎಂಬ ಆಜ್ಞೆ ಬಂದಿತು. ಹಾಗೆ ಆರ್ಥಿಕವಾಗಿ ಕೆಳಮಟ್ಟದಲ್ಲಿದ್ದ ವರ್ಗಗಳಿಂದ ೨೫% ಹೊಸ ವಿದ್ಯಾರ್ಥಿಗಳು ತಮ್ಮ ಶಾಲೆಗೆ ಬಲವಂತವಾಗಿ ಬರುವುದು ಆಕೆಗೂ ತನ್ನ ಸಿಬ್ಬಂದಿಗೂ ಇಷ್ಟವಿರಲಿಲ್ಲ. ಆದರೂ ಲಿಖಿತ ಸುತ್ತೋಲೆ ಬಂದಿದ್ದರಿಂದ ಆಕೆ ಅದನ್ನು ನಿರ್ಲಕ್ಷಿಸುವಂತಿರಲಿಲ್ಲ. ಈಗ ತನ್ನ ಮಂಡಲಿಯ ಎದುರು ಅದನ್ನು ಘೋಷಿಸಲೇಬೇಕಿತ್ತು. ಆಕೆ ಅದನ್ನು ಹೇಗೆ ನಿಭಾಯಿಸುತ್ತಾರೆಂದು ಅವರೆಲ್ಲರೂ ಕೇಳುವುದು ಖಂಡಿತ.  ಅದು ಶುಕ್ರವಾರವಾದ್ದರಿಂದ ಆಕೆಹೆ ಪೂರ್ವಯೋಜನೆಗೂ ಅವಕಾಶವಿರಲಿಲ್ಲ.

ಮನೆಗೆ ಹೊರಡುವ ಬಸ್ ಏರುವ ಮುನ್ನ ಶ್ರೀಮತಿ ಮೆನನ್ ರವರು, ಆ ಸುತ್ತೋಲಗದ ಒಂದು ಪ್ರತಿಯನ್ನು ತನ್ನ ಸಿಬ್ಬಂದಿಯವರೆಲ್ಲರಿಗೂ ಕಳುಹಿಸಿಯಾಗಿತ್ತು. ಆ ವಿಷಯವಾಗಿಯೇ ಚರ್ಚಿಸಲು ಸೋಮವಾರ ಶಾಲೆಯ ಬಳಿಕೆ ಎಲ್ಲರೂ ಸಮಾಲೋಚನೆಗೆ ಬರಬೇಕೆಂದು ಸೂಚಿಸಿಯಾಗಿತ್ತು. ಶಿಕ್ಷಕೇತರ ಸಿಬ್ಬಂದಿ ಹಾಗೂ ಕಚೇರಿಯ ಸಿಬ್ಬಂದಿಗೂ ಸುತ್ತೋಲೆಯನ್ನು ಕಳುಹಿಸಿದ್ದರು. National Curriculum Framework ಮತ್ತು RtEಗಳ ಪ್ರತಿಯನ್ನು ಶಾಲೆಯಿಂದ ತೆಗೆದುಕೊಂಡು ಹೋದರು. ವಾರಾಂತ್ಯದಲ್ಲಿ ಅದನ್ನು ಓದಿ ಸಮಾಲೋಚನೆಯಲ್ಲಿನ ವಾದವಿವಾದಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕೆಂದು ಆಲೋಚಿಸಿದರು.

ಶ್ರೀಮತಿ ಮೆನನ್ ರವರು ಸೋಮವಾರ ಶಾಲೆಯೊಳಗೆ ಪ್ರವೇಶಿಸುವಾಗ ಬಹಳ ಕಷ್ಟವೆನಿಸಿತು. ಎಂದಿನಂತೆ ಶಾಲೆಯಲ್ಲಿ ಓಡಾಡುತ್ತಿದ್ದರೂ, ಆಕೆ ಬೇರೇನನ್ನೋ ಹುಡುಕುತ್ತಿದ್ದಂತೆ ತೋರುತ್ತಿತ್ತು. ತರಗತಿಯ ಪರೀಕ್ಷಣದ ವೇಳೆಯಲ್ಲಿ ಎಂದಿಗಿಂತ ತುಂಬ ವಿಭಿನ್ನವಾದ ಪ್ರಶ್ನೆಗಳನ್ನು ಕೇಳಿದರು. ಅವರ ಟಿಪ್ಪಣಿ ಪುಸ್ತಕಗಳನ್ನು ನೋಡುತ್ತ, ಕಲಿಕೆಯ ಉಪಕರಣಗಳ ಬಗ್ಗೆ ವಿಚಾರಿಸಿದರು. ವಿದ್ಯಾರ್ಥಿಗಳು ಬರೆದಿದ್ದ ವಿಚಾರಕ್ಕಿಂತ ಅವರ ವಿಷಯಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿದರು.

ಶ್ರೀಮತಿ ಮೆನನ್ ರವರು ಅಂದಿನ ಮಧ್ಯಾಹ್ನದ ಸಮಾಲೋಚನೆಯನ್ನೂ (meeting) ಬೇರೊಂದು ರೀತಿಯಲ್ಲಿ ಪ್ರಾರಂಭಿಸಿದರು. ಶಿಕ್ಷಕರನ್ನು ಗುಂಪುಗುಂಪಾಗಿ ಕುಳಿತುಕೊಳ್ಳುವಂತೆ ವಿನಂತಿಸಿದರು. ಒಂದೊಂದು ಗುಂಪಿನಲ್ಲೂ ಶಿಕ್ಷಕೇತರ ಸಿಬ್ಬಂದಿಯೊಬ್ಬರನ್ನೂ ಸೇರಿಸಿದರು. ಸಾಮಾಜಿಕ ಬದಲಾವಣೆಯನ್ನು ತರುವಾಗ ಶಿಕ್ಷಣತಜ್ಞರ ಜವಾಬ್ದಾರಿಗಳೇನು ಎನ್ನುವುದರ ಕುರಿತಾಗಿ NCFನಿಂದ ಕೆಲವು ಸಾಲುಗಳನ್ನು ಓದಿ ಹೇಳಿದರು. ಆ ಪ್ರಸ್ತುತ ಭಾಗದ ಪ್ರತಿಗಳನ್ನು ಎಲ್ಲ ಗುಂಪುಗಳಿಗೆ ಹಂಚಿದರು. ಓದಿ ಮುಗಿಸಿದ ಬಳಿಕ ಆಕೆ ಹೇಳಿದರು :

> ಶುಕ್ರವಾರದವರೆಗೂ ನಾನು ಭಾವಿಸಿದ್ದೆ ನಾವು ಮಕ್ಕಳನ್ನು ಸಮಾಜದೊಳಗೆ ಕಳಿಸಿಕೊಟ್ಟರಾಯಿತು ಎಂದು. ಆದರೆ NCFನ್ನು ಮೊಟ್ಟಮೊದಲ ಬಾರಿ ಸರಿಯಾಗಿ ಓದಿದ ಮೇಲೆ, ನನಗರ್ಥವಾಯಿತು NCF ಶಿಕ್ಷಣತಜ್ಞರಾದ ನಮ್ಮಿಂದ ನಿರೀಕ್ಷಿಸುವುದು ಇದನ್ನು - ಸಮಾಜದಲ್ಲಿ ಇರುವ ಅಸಮಾನತೆ ಹಾಗೂ ಅಸಮತೋಲನಗಳನ್ನೂ ನಾವಿಲ್ಲಿ ಎದುರಿಸಬೇಕು. ನಾವು ನಮ್ಮ ವಿದ್ಯಾರ್ಥಿಗಳನ್ನು ಹೇಗೆ ಬೆಳೆಸ ಬೇಕೆಂದರೆ, ಮುಂದೆ ನಮ್ಮ ದೇಶದಲ್ಲಿ ಅಂತಹ ಸಮಸ್ಯೆಗಳೇ ಇರಬಾರದು. ನಮ್ಮ ಮನೋಭಾವವನ್ನು ಪರಿವರ್ತಿಸಿಕೊಳ್ಳುವಂತಹ ಅವಕಾಶವೊಂದನ್ನು ಸರ್ಕಾರದ ಸುತ್ತೋಲೆಯು ನಮಗೆ ಒದಗಿಸಿದೆ, ಈ ಸುತ್ತೋಲೆಯ ಕುರಿತಾಗಿ ನಿಮ್ಮ ನಿಮ್ಮ ಗುಂಪುಗಳಲ್ಲಿ ಚರ್ಚಿಸಿರಿ. ಈ ಸುತ್ತೋಲೆಗೆ ನಾವೆಲ್ಲರೂ ಹೇಗೆ ಸಕಾರಾತ್ಮಕವಾಗಿ ಸ್ಪಂದಿಸಬಹುದು ಎನ್ನುವುದನ್ನು ಹೇಳಿ. ದೇಶದಲ್ಲಿ ನಾವು ತರಲಿಚ್ಛಿಸುವ ಸಮಾನತೆಗೆ ನಮ್ಮ ಶಾಲೆಯೇ ಒಂದು ಮಾದರಿಯಾಗಬೇಕು. ಹೊಸದಾಗಿ ಬರುವ ಯಾವುದೇ ವಿದ್ಯಾರ್ಥಿಗಳನ್ನು ಸ್ವೀಕರಿಸುವಷ್ಟೇ ಸಹಜವಾಗಿ ಹಳೆಯ ವಿದ್ಯಾರ್ಥಿಗಳು ಈ ಹೊಸ ವಿದ್ಯಾರ್ಥಿಗಳನ್ನೂ ಸ್ವೀಕರಿಸುವಂತೆ ಮಾಡಲು ಒಂದೊಂದು ಗುಂಪು ಒಂದೊಂದು ಉಪಾಯವನ್ನು ಮುಂದಿಡಬೇಕು. ಅದೂ ಪೂರ್ವಾಗ್ರಹಗಳಿಲ್ಲದೆ! ಈ ಸವಾಲನ್ನು ನೀವೆಲ್ಲ ಸ್ವೀಕರಿಸಬಲ್ಲಿರಾ?

ಕೋಣೆಯಲ್ಲಿ ಮೌನ ತುಂಬಿತ್ತು. ಮೆಲ್ಲನೆ ಒಬ್ಬರು ಶಿಕ್ಷಕರು ನುಡಿದರು "ಹೂಂ ಮೇಡಮ್. ನಾವು ಈ ಸವಾಲನ್ನು ಸ್ವೀಕರಿಸುತ್ತೇವೆ". ಈಗ ಎಲ್ಲರೂ ಚಟುವಟಿಕೆಯಲ್ಲಿ ತೊಡಗಿದರು. ಶ್ರೀಮತಿ ಮೆನನ್ ರವರು ತಂಡದಿಂದ ತಂಡದತ್ತ ನಡೆದಾಡುತ್ತ, ಭಾವುಕರಾಗಿ ಚರ್ಚಿಸುತ್ತಿದ್ದ ಶಿಕ್ಷಕರ ಮಾತುಗಳನ್ನು ಗಮನಿಸಿದರು. ಇವರೆಲ್ಲ ಮುಂದೆ ತನ್ನ ಉತ್ತರಾಧಿಕಾರಿಗಳಾಗುವವರಾದ್ದರಿಂದ ಅವರೆಲ್ಲರೂ ಮುಕ್ತವಾಗಿ ಮಾತನಾಡುವ ಅಗತ್ಯವಿತ್ತು. ಸಮಾಲೋಚನೆ ಮುಗಿಯುವ ಹೊತ್ತಿಗೆ, ಮಂಡಲಿಯ ಪ್ರಶ್ನೆಗಳನ್ನು ಉತ್ತರಿಸುವುದಕ್ಕೆ ಹಲವು ಉಪಾಯಗಳು ಸಂಗ್ರಹವಾದವು. ಸಮಾಲೋಚನೆಯನ್ನು ನಡೆಸುವ ಶೈಲಿಯನ್ನು ಬದಲಾಯಿಸುವುದರ ಮೂಲಕ ಶ್ರೀಮತಿ ಮೆನನ್ ರವರು ತನ್ನ ಸಿಬ್ಬಂದಿಯನ್ನು ಚೆನ್ನಾಗಿ ಪಾಲ್ಗೊಳ್ಳುವಂತೆ, ಭೇದರಾಹಿತ್ಯದ ಭಾವವನ್ನು ಆಚರಿಸುವಂತೆ ಹಾಗೂ ಆ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳತ್ತ ಗಮನ ಹರಿಸುವಂತೆ

ಮಾಡಿದರು. ಆ ಎಷ್ಟೋ ಉಪಾಯಗಳು ಸ್ವತಃ ಆಕೆಗೇ ಹೊಳೆದಿರಲಿಲ್ಲ!

## ಚಟುವಟಿಕೆ 5 : ವಿನೂತನ ಶೈಲಿಗಳನ್ನು ಆವಿಷ್ಕರಿಸುವುದಕ್ಕಾಗಿ ಸೇರಿ ಯೋಜನೆ ಹೂಡುವುದು

ಪ್ರಸಂಗ ೧ ನ್ನು ನಿಮ್ಮ ಕಲಿಕೆಯ ಡೈರಿಯಲ್ಲಿ ಬರೆದು ಚಿಂತನೆ ನಡೆಸಿ. ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸಿ:

ಸುತ್ತೋಲೆಯು ಮಂಡಿಸಿದ ವಿಚಾರದ ಬಗ್ಗೆ ಸ್ವತಃ ಶ್ರೀಮತಿ ಮೆನನ್ ರವರೇ ತಮ್ಮ ಕೆಲವು ಭಾವನೆಗಳನ್ನು ಬದಲಾಯಿಸಿಕೊಂಡರು. ಇಂತಹ ಬದಲಾವಣೆ ತನ್ನಲ್ಲಿ ಆಗಲು, ಆಕೆ ವಾರಾಂತ್ಯದಲ್ಲಿ ಏನು ಮಾಡಿದ್ದಿರಬಹುದು ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳಿ, ಇಂತಹ ಬದಲಾವಣೆಗೆ ತೆರೆದುಕೊಳ್ಳುವುದು ಆಕೆಗೆ ಸುಲಭವಾಯಿತೇ ಅತಹ್ವಾ ಕಷ್ಟವಾಯಿತೆ? ಆಕೆಯ ಜಾಗದಲ್ಲಿ ಬೇರೆಯವರಿದ್ದಿದ್ದರೇ ಇಂತಹದೇ ಭಾವನಾತ್ಮಕವಾದ ಬದಲಾವಣೆಯನ್ನು ತಂದುಕೊಳ್ಳಲು ಏನು ಅಡೆತಡೆಗಳು ಆಗುತ್ತಿದ್ದವು?

ಶುಕ್ರವಾರದವರೆಗೂ ನಾನು ಭಾವಿಸಿದ್ದೆ ನಾವು ಮಕ್ಕಳನ್ನು ಸಮಾಜದೊಳಗೆ ಕಳಿಸಿಕೊಟ್ಟರಾಯಿತು ಎಂದು. ಆದರೆ NCFನ್ನು ಮೊಟ್ಟಮೊದಲ ಬಾರಿ ಸರಿಯಾಗಿ ಓದಿದ ಮೇಲೆ, ನನಗರ್ಥವಾಯಿತುNCF ಶಿಕ್ಷಣತಜ್ಞರಾದ ನಮ್ಮಿಂದ ನಿರೀಕ್ಷಿಸುವುದು ಇದನ್ನು - ಸಮಾಜದಲ್ಲಿ ಇರುವ ಅಸಮಾನತೆ ಹಾಗೂ ಅಸಮತೋಲನಗಳನ್ನೂ ನಾವಿಲ್ಲಿ ಎದುರಿಸಬೇಕು. ನಾವು ನಮ್ಮ ವಿದ್ಯಾರ್ಥಿಗಳನ್ನು ಹೇಗೆ ಬೆಳೆಸಬೇಕೆಂದರೆ, ಮುಂದೆ ನಮ್ಮ ದೇಶದಲ್ಲಿ ಅಂತಹ ಸಮಸ್ಯೆಗಳೇ ಇರಬಾರದು. ನಮ್ಮ ಮನೋಭಾವವನ್ನು ಪರಿವರ್ತಿಸಿಕೊಳ್ಳುವಂತಹ ಅವಕಾಶವೊಂದನ್ನು ಸರ್ಕಾರದ ಸುತ್ತೋಲೆಯು ನಮಗೆ ಒದಗಿಸಿದೆ, ಈ ಸುತ್ತೋಲೆಯ ನಿಮ್ಮ ಗುಂಪುಗಳಲ್ಲಿ ಚರ್ಚಿಸಿರಿ. ಈ ಸುತ್ತೋಲೆಗೆ ನಾವೆಲ್ಲರೂ ಯಾವ ರೀತಿ ಸಕಾರಾತ್ಮಕವಾಗಿ ಸ್ಪಂದಿಸಬಹುದು ಎನ್ನುವುದನ್ನು ಹೇಳಿ. ದೇಶದಲ್ಲಿ ನಾವು ತರಲಿಚ್ಚಿಸುವ ಸಮಾನತೆಗೆ ನಮ್ಮ ಶಾಲೆಯೇ ಒಂದು ಮಾದರಿಯಾಗಬೇಕು. ಹೊಸದಾಗಿ ಬರುವ ಯಾವುದೇ ವಿದ್ಯಾರ್ಥಿಗಳನ್ನು ಸ್ವೀಕರಿಸುವಷ್ಟೇ ಸಹಜವಾಗಿ ಹಳೆಯ ವಿದ್ಯಾರ್ಥಿಗಳು ಈ ಹೊಸ ವಿದ್ಯಾರ್ಥಿಗಳನ್ನೂ ಸ್ವೀಕರಿಸುವಂತೆ ಮಾಡಲು ಒಂದೊಂದು ಗುಂಪು ಒಂದೊಂದು ಉಪಾಯವನ್ನು ಮುಂದಿಡಬೇಕು. ಅದೂ ಪೂರ್ವಾಗ್ರಹಗಳಿಲ್ಲದೆ! ಈ ಸವಾಲನ್ನು ನೀವೆಲ್ಲ ಸ್ವೀಕರಿಸಬಲ್ಲಿರಾ?

- ಸಮಾಲೋಚನಾ ಸಭೆಯು (meeting) ಸಿಬ್ಬಂದಿಯ ಮನೋಭಾವದಲ್ಲಿ ಬದಲಾವಣೆಯನ್ನು ತರಲು ಸಹಾಯಕವಾಗುವಂತೆ ಯೋಜಿಸಲಾಯಿತು. ಹಾಗೆ ಆಗಲು ಏನು ಸಹಾಯಕವಾಯಿತು? ನೀವು ಆ ಸ್ಥಾನದಲ್ಲಿದ್ದಿದ್ದರೆ, ನಿಮ್ಮ ಸಿಬ್ಬಂದಿಗೆ ಇದೇ ವಿಷಯದ ಮಹತ್ವವನ್ನು ಮನಗಾಣಿಸಲು, ಅವರಲ್ಲಿ ಬದಲಾವಣೆಯನ್ನು ತರಲು, ನೀವು ಯಾವ ವಾದಗಳನ್ನೂ ಸಂಪನ್ಮೂಲಗಳನ್ನೂ ಬಳಸುತ್ತಿದ್ದಿರಿ?
- ಸಿಬ್ಬಂದಿಯ ಎಲ್ಲ ಸದಸ್ಯರೂ ಭಾಗವಹಿಸುವಂತೆ ಮಾಡಲು ಶ್ರೀಮತೀ ಮೆನನ್ ರವರು ಯಾವ ಹೆಜೆಗಳನ್ನು ತೆಗೆದುಕೊಂಡರು?
- ಇಂತಹದ್ದೇ ಸಂದರ್ಭದಲ್ಲಿ ನೀವು ಇರುವಂತಾದಲ್ಲಿ, ಈ ಪ್ರಸಂಗದಿಂದ ನೀವು ಕಲಿತಿರುವುದೇನನ್ನು?

**ಚರ್ಚೆ:**

ಶ್ರೀಮತಿ ಮೆನನ್ ರವರಿಗೂ ಇತರ ವರ್ಗಗಳ ವಿದ್ಯಾರ್ಥಿಗಳನ್ನು ತನ್ನ ಶಾಲೆಯಲ್ಲಿ ಸೇರಿಸಿಕೊಳ್ಳುವ ವಿಷಯದಲ್ಲಿ ಸ್ವಲ್ಪ ಅಸಮಾಧಾನವಿತ್ತಾದರೂ, ಆಕೆ ಇದನ್ನು ಸವಾಲಾಗಿ ಸ್ವೀಕರಿಸಿ ಸಕಾರಾತ್ಮಕ ಭಾವವನ್ನು ವ್ಯಕ್ತಪಡಿಸಿದರು. ನೀವು ಗಮನಿಸಿರಬಹುದು,. ಆ ಹೊಸ ವಿದ್ಯಾರ್ಥಿಗಳನ್ನು ತನ್ನ ಶಾಲೆಯಲ್ಲಿ ಸ್ವೀಕರಿಸುವಲ್ಲಿ ಪೂರ್ಣ ಯಶಸ್ವಿಯಾಗಬೇಕಾದರೆ ಮೊದಲು ಶಾಲೆಯಲ್ಲಿ ಭೇದರಾಹಿತ್ಯದ ಸಂಸ್ಕೃತಿಯನ್ನೂ ಸ್ವಲ್ಪ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಆಕೆ ಅರಿತರು.

ವಾರಾಂತ್ಯದಲ್ಲಿ ಶ್ರೀಮತಿ ಮೆನನ್ ರವರು ಏನು ಮಾಡಿದರು ಎನ್ನುವುದು ಉಲ್ಲೇಖವಾಗಿಲ್ಲ. ಆದರೆ ಆಕೆ ಔಪಚಾರಿಕ ದಾಖಲೆಗಳನ್ನು ಅಧ್ಯಯನ ಮಾಡಿದ್ದಂತೂ ಸ್ಪಷ್ಟ. ಅಷ್ಟರಿಂದಲೇ ಆಕೆ ಬದಲಾಗಿಬಿಟರು ಎನ್ನಲಾಗದು. ಆದರೆ ಇಂತಹ ವಿಷಯಗಳಿಗೆ ತಾನು ಗಮನಹರಿಸಲೇ ಬೇಕು, ಸಕ್ರಿಯವಾಗಲೇಬೇಕು ಎನ್ನುವುದನ್ನು ಬಹುಶಃ ಅರ್ಥಮಾಡಿಕೊಂಡರು. ಅಂತೂ ವಿದ್ಯಾರ್ಥಿಗಳ ಸಾಧನೆ ಹಾಗೂ ಪಾಲ್ಗೊಳ್ಳುವಿಕೆಯನ್ನೇ ಮುಖ್ಯವೆಂದು ಬಗೆದ ಶ್ರೀಮತಿ ಮೆನನ್ ರವರು ತನ್ನ ಅಭಿಪ್ರಾಯಗಳನ್ನು ಬದಲಾಯಿಸಲು ಸಿದ್ಧರಾದರು. ಇದು ಎಲ್ಲರಿಗೂ ಸುಲಭವಾಗುವುದಿಲ್ಲ. ನಿಮ್ಮ ಶಾಲೆಯಲ್ಲೇ ತಿಳಿದೋ ತಿಳಿಯದೆಯೋ ಇದನ್ನು ವಿರೋಧಿಸುತ್ತ ಬೇರೊಂದು ವಿಧಾನದ ಬಗ್ಗೆಯೇ ಆಲೋಚಿಸುತ್ತಿರುವ ಸಿಬ್ಬಂದಿಗಳಿರಬಹುದು.

ಈ ಪ್ರಸಂಗದಲ್ಲಿ ಬದಲಾವಣೆಯನ್ನು ಪ್ರೇರೇಪಿಸುವಂತಹ ಬಾಹ್ಯದ ಒಂದು ಶಕ್ತಿಯಿತ್ತು. ಜೊತೆಗೆ ಶ್ರೀಮತಿ ಮೆನನ್ ತನ್ನ ಮನೋಭಾವವನ್ನು ನಿರ್ವಹಿಸಲೇ ಬೇಕಾಗುವಂತೆ ಸಮಯದ ತೀವ್ರ ಮಿತಿಯಿತ್ತು. ನಿಮ್ಮ ವಿಷಯದಲ್ಲಿ ಸಂದರ್ಭಗಳು ಬೇರೆ ಆಗಬಹುದು. ಹೆಚ್ಚು ಸಮಯವೂ ಸಿಕ್ಕೀತು. ಬದಲಾವಣೆಗಳನ್ನು ಮನೋಭಾವಗಳನ್ನೂ ಕ್ರಮವಾಗಿ ನಿರ್ವಹಿಸುತ್ತ ಸಾಗಬಹುದೇನೋ. ತನ್ಮೂಲಕ ಸುಲಭದಲ್ಲಿ ಬದಲಾಗದಂತಹ ಸಿಬ್ಬಂದಿವರ್ಗವನ್ನೂ ಕ್ರಮವಾಗಿ ದಾರಿಗೆ ತರಲು ಅವಕಾಶಗಳಿದ್ದಾವು.

ತನ್ನ ಸಿಬ್ಬಂದಿಯ ಮನೋಭಾವವನ್ನೆಲ್ಲ ಅಷ್ಟು ಬೇಗ ಬದಲಾಯಿಸುವುದು ಕಷ್ಟಸಾಧ್ಯ ಎನ್ನುವುದು ಶ್ರೀಮತಿ ಮೆನನ್ ರವರಿಗೆ ಗೊತ್ತಿತ್ತು. ಹಾಗಾಗಿ ತಮ್ಮಿಂದ

ಏನನ್ನು ನಿರೀಕ್ಷಿಸಲಾಗಿದೆ ಎನ್ನುವುದನ್ನು ಸ್ಪಷ್ಟ ಪಡಿಸಿ, ತನಗೆ ಸಹಕಾರ ನೀಡುವಂತೆ ಕೋರಿಕೊಂಡರು. ಶಿಕ್ಷಣದ ಗುರಿಗಳ ಬಗ್ಗೆ ಶಾಲಾ ಮುಖಂಡರಿಗೆ ಸ್ಪಷ್ಟ ಕಲ್ಪನೆ ಇರಬೇಕು ಎನ್ನುವುದನ್ನು ಎಲ್ಲ ಸಂಶೋಧನೆಗಳೂ ಸಾರುತ್ತವೆ. ತಮ್ಮ ಗುರಿಗಳನ್ನು ಪರೀಕ್ಷಾ ಫಲಿತಾಂಶಗಳಿಗಿಂತ ಮುಂದಕ್ಕೆ ವಿಸ್ತರಿಸಿ, ಭೇದರಹಿತ ಕಲಿಕೆಯ ಅವಕಾಶಗಳನ್ನು ಎಲ್ಲರಿಗೂ ಒದಗಿಸುವತ್ತ ಗಮನಹರಿಸಬೇಕು. ವಿದ್ಯಾರ್ಥಿಗಳೂ ಸಿಬ್ಬಂದಿಯೂ ಸಮಾನತೆ ಹಾಗೂ ಸೌಹಾರ್ದತೆಗಳನ್ನು ತಾಳುವಂತಹ ಶಾಲೆಯನ್ನು ಮುಖಂಡರು ನಿರ್ಮಿಸಬಲ್ಲರು.

ಯಾವುದೇ ಭೇದಬುದ್ಧಿಯಿಲ್ಲದೆ ಹೊಸ ವಿದ್ಯಾರ್ಥಿಗಳನ್ನು ಸ್ವೀಕರಿಸುವಂತೆ ತನ್ನ ಸಿಬ್ಬಂದಿಗೆ ಶ್ರೀಮತೀ ಮೆಮನ್ ರವರು ಹೇಳಿದ್ದನ್ನು ಗಮನಿಸಿದಿರೇನು? ಅದೇ ಬಹುಮುಖ್ಯ ಮನವಿ. ನಮ್ಮೆಲ್ಲ ಪೂರ್ವಾಗ್ರಹಗಳು ಇರುತ್ತವೆ. ಕೆಲವೊಮ್ಮೆ ಕೆಟ್ಟ ಅನುಭವಗಳ ಹಿನ್ನಲೆಯಲ್ಲಿ ಹುಟ್ಟಿರಬಹುದು, ಮತ್ತೆ ಕೆಲವೊಮ್ಮೆ ಯಾವುದೇ ನೈಜ ಆಧಾರವಿಲ್ಲದೆಯೂ ಹುಟ್ಟಿರಬಹುದು. . ನಮ್ಮ ಪೂರ್ವಾಗ್ರಹಗಳಿಗೆ ಆಧಾರವೇನು ಎನ್ನುವುದನ್ನು ಪರೀಕ್ಷಿಸಿ ಅದನ್ನು ಪ್ರಶ್ನಿಸುವುದು ಮುಖ್ಯ. ಮತದ ಹಿನ್ನಲೆಯ ಬಗ್ಗೆ, ಸ್ತ್ರೀಯರ ಬಗ್ಗೆ ಹಾಗೂ ಅಂಗವೈಕಲ್ಯ ಇರುವವರ ಬಗ್ಗೆ ಪೂರ್ವಾಗ್ರಹಗಳಿರುವುದು ಸರ್ವೇ ಸಾಮಾನ್ಯ. ಆದರೆ ಇಂತಹ ಪೂರ್ವಾಗ್ರಹವನ್ನು ನಿರ್ಬಂಧಿಸುವಂತಹ ಪರಿಸರವನ್ನು ಶಾಲೆಗಳಲ್ಲಿ ನಿರ್ಮಿಸಲು ಸಾಧ್ಯ.

ತನ್ನ ಸ್ವಂತ ಪೂರ್ವಾಗ್ರಹಗಳನ್ನು ಭಾವನೆಗಳನ್ನು ಮೊದಲು ಹದ್ದಿಕ್ಕುವುದರ ಮೂಲಕ, ಶ್ರೀಮತೀ ಮೆನನ್ ರವರು ತನ್ನ ಶಾಲೆಯಲ್ಲಿ ಪ್ರಚಲಿತವಿದ್ದ ಭೇದದ ಸಂಸ್ಕೃತಿಯನ್ನು ದಿಟ್ಟತನದಿಂದ ಎದುರಿಸಿದರು.

ನೀವೂ ಗಮನಿಸಿರಬಹುದು, ಮುಖಂಡರಾದರೂ ಶ್ರೀಮತೀ ಮೆನನ್ ರವರೊಬ್ಬರೇ ಈ ಸಮಸ್ಯೆಯನ್ನು ಎದುರಿಸಬೇಕಾಗಿಬ್ಬರಲಿಲ್ಲ. ತನ್ನ ಶಾಲೆಯ ಸಂಪನ್ಮೂಲಗಳನ್ನೂ, ಉಪಾಯಗಳನ್ನೂ ಬಳಸಿ ಶಾಲಾಸಮುದಾಯಕ್ಕೇ ಉಪಯೋಗವಾಗುವಂತಹ ರೀತಿಯಲ್ಲಿ, ಎಲ್ಲರೂ ಸೇರಿ ಆ ಸಮಸ್ಯೆಯನ್ನು ಎದುರಿಸುವಂತೆ ಮಾಡಿದರು. ಗಮನಿಸಿ ನೋಡಿ, ಆಕೆ ತನ್ನ ಸಮುದಾಯದ ಎಲ್ಲರನ್ನೂ ಭಾಗವಹಿಸುವಂತೆಯೂ ಮಾಡಿದರು. ಶಿಕ್ಷಕ ಸಿಬ್ಬಂದಿಯು ಶಿಕ್ಷಕೇತರ ಸಿಬ್ಬಂದಿಯಲ್ಲಿ ಭೇದಭಾವ ಇಟ್ಟುಕೊಳ್ಳುವುದು ಸುಲಭ. ಆದರೆ ಅವರು ಅಧ್ಯಾಪನ ಮಾಡದೇ ಇರಬಹುದು. ಆದರೆ ವಿದ್ಯಾರ್ಥಿಗಳೊಡನೆ ವ್ಯವಹರಿಸುವಾಗ ಭೇದರಾಹಿತ್ಯದ ಭಾವವನ್ನು ಬೆಳೆಸುವಲ್ಲಿ ಅವರೂ ಸೇರಿರುತ್ತಾರಷ್ಟೆ? ಹಾಗಾಗಿ ಶಿಕ್ಷಕರ ಪಾತ್ರಕ್ಕೆ ಪೂರಕವಾದ ಪಾತ್ರವನ್ನು ಅಮೂಲ್ಯ ದೃಷ್ಟಿಕೋನವನ್ನೂ ಅವರೂ ಕೊಡುತ್ತಾರೆ.

ಶ್ರೀಮತಿ ಮೆನನ್ ರವರು ವಿಶೇಷ ವರ್ಗದ ವಿದ್ಯಾರ್ಥಿಗಳ ಕುರಿತಾಗಿ ತನ್ನ ಸಿಬ್ಬಂದಿಯು ಚರ್ಚಿಸುವಂತೆ ಮಾಡಿದರು. ಅವರೆಲ್ಲರೂ ಸೇರಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು, ತನ್ಮೂಲಕ ಆ ವಿದ್ಯಾರ್ಥಿಗಳು ಹೇಗೆ ಉತ್ತಮ ಸಾಧನೆ ಮಾಡುವಂತೆ ಮಾಡಬೇಕು ಹಾಗೂ ಆ ಕ್ರಮಗಳನ್ನು ಹೇಗೆ ಆಕೆಯೂ ಆಕೆಯ ಸಿಬ್ಬಂದಿಯೂ ಜಾರಿಗೆ ತರಬೇಕು ಎನ್ನುವುದನ್ನು ಕ್ರಮಕ್ಕೆ ತಂದರು. ಈ ಬದಲಾವಣೆಗಳು ಸಂದರ್ಭ ಹಾಗೂ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿರಬೇಕು

Video: School Leadership – Inclusion

## ಚಟುವಟಿಕೆ 6 : ಕಾರ್ಯಯೋಜನೆಗೆ ನಾಂದಿ

ಚಟುವಟಿಕೆ 5 ರಲ್ಲಿ ನೋಡಿದಂತೆ, ಹೆಣ್ಣುಮಕ್ಕಳು ಭೇದಭಾವಕ್ಕೆ ತುತ್ತಾಗಿರುವುದಲ್ಲದೆ, ಆರ್ಥಿಕವಾಗಿ ಕೆಳಮಟ್ಟದ ಅಥವಾ ಅಲ್ಪಸಂಖ್ಯ ಪಂಗಡಗಳಿಂದ ಬಂದಾಗ, ಅವರಿಗೆ ಕಲಿಕೆಯ ಅವಕಾಶಗಳು ಕಡಿಮೆ. ನಿಮ್ಮ ಶಾಲೆಯಲ್ಲಿ ಭೇದರಾಹಿತ್ಯವನ್ನು ಅಳವಡಿಸಲು ಈ ವಿಚರವನ್ನೋ ಅಥವಾ ಯಾವುದಾದರೂ ಪ್ರಾಮುಖ್ಯತೆಯ ವಿಚಾರವನ್ನೋ ಆಯ್ದುಕೊಳ್ಳಿ. ಈ ಸಮಸ್ಯೆಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವುದನ್ನು ಚರ್ಚಿಸಿ. ಚಟುವಟಿಕೆ ೬ ರಲ್ಲೇ ನೀವು ಈ ವಿಷಯವಾಗಿ ಆಲೋಚಿಸಲು ಪ್ರಾರಂಭಿಸ್ರಬಹುದು. ಆದರೆ ಈಗ ಅದರ ಬಗ್ಗೆ ಸ್ಪಷ್ಟವಾದ ಮೂರ್ತವಾದ ಕಾರ್ಯಯೋಜನೆಗಳನ್ನು ಮಾಡಲು ಪ್ರಾರಂಭಿಸಬೇಕು. ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಹಾಗೂ ಒಟ್ಟು ಗೂಡಿ ಸೂಕ್ತ ಕ್ರಮಗಳನ್ನು ಜಾರಿಗೆ ತರುವ ಸಲುವಾಗಿಯೂ ನೀವು ನಿಮ್ಮ ಸಹೋದ್ಯೋಗಿಯೊಂದಿಗೆ ಕೆಲಸ ಮಾಡಲಾರಂಭಿಸಬೇಕಾಗುತ್ತದೆ. ಕೆಳಕಂಡಂತೆ ಮಾಡುವುದು ಸಹಾಯಕವಾಗಬಹುದು-

- ನಿಮ್ಮ ಶಾಲೆಯಲ್ಲಿ (ಅಥವಾ ನಿಮಗಿಷ್ಟವಾದ ವಿಭಾಗದಲ್ಲಿ) ಅಲ್ಪಸಂಖ್ಯಾತ ಪಂಗಡಗಳಲ್ಲಿ ಆರ್ಥಿಕವಾಗಿ ಕೆಳಮಟ್ಟದಿಂದ ಬಂದ ಹೆಣ್ಣುಮಕ್ಕಳ ಪಟ್ಟಿಮಾಡಿಕೊಳ್ಳಿ. ಆ ಮಕ್ಕಳ ತರಗತಿ, ವಿಷಯಗಳ ಆಯ್ಕೆ, ಕುಟುಂಬ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಹಿನ್ನಲೆಗಳನ್ನು ಗುರುತಿಸಿ. ಹಾಗೆಯೇ ವಿವಿಧ ವಿಷಗಳಲ್ಲಿನ ಅವರ ಹಾಜರಾತಿ ಹಾಗೂ ಫಲಿತಾಂಶಗಳ ಅಂಕಿ ಅಂಶಗಳನ್ನೂ ಗುರುತಿಸಿ. ದೊಡ್ಡ ಸಂಖ್ಯೆಯ ಮಕ್ಕಳೇ ಇದ್ದರೆ, ಆರರಿಂದ ಏಳು ಮಂದಿಯ ಗುಂಪುಗಳನ್ನು ಮಾಡಿ, ಅವರ ಅನುಭವಗಳ ಶೋಧನೆಯ ಪ್ರಸಂಗಾಧ್ಯಯನ ನಡೆಸಿರಿ.
- ಭೇದರಾಹಿತ್ಯದ ನಾಲ್ಕು ಆಯಾಮನಗಳನ್ನು ಗಮನಿಸಿ (ಅವಕಾಶ, ಸ್ವೀಕರಣೆ, ಭಾಗವಹಿಸುವಿಕೆ ಹಾಗೂ ಸಾಧನೆ) ಇವುಗಳ ಪೈಕೆ ಯಾವ

ಕ್ಷೇತ್ರದಲ್ಲಿ ಆ ಮಕ್ಕಳು ಭೇದವನ್ನು ಅಥವಾ ಪ್ರತಿಕೂಲ ಪರಿಸ್ಥಿತಿಯನ್ನು ಅನುಭವಿಸುತ್ತಾರೆ ಎನ್ನುವುದನ್ನು ಗುರುತಿಸಿ.

- ನಿಮ್ಮ ಕೆಲಸಕಾರ್ಯಗಳ ನಡುವೆಯೂ ಹೇಗಾದರೂ ಸಮಯ ಮಾಡಿಕೊಂಡು ಈ ಮಕ್ಕಳೊಂದಿಗೆ ಕೆಲವು ಪಾಠಗಳನ್ನು ಚರ್ಚಿಸಿ. ಅವರ ಗಮನಕ್ಕೆ ಬಾರದಂತೆ, ಅವರು ಕಲಿಕೆಯಲ್ಲಿ ಹೇಗೆ ಭಾಗವಹಿಸುತ್ತಾರೆ ಎನ್ನುವುದನ್ನು ಗಮನಿಸಿ. ಅವರು ಭಾಗವಹಿಸುತ್ತಿರುವರೆ? ಸಕ್ರಿಯವಾಗಿ ಭಾಗವಹಿಸಲು ಅವರಿಗೆ ಅಡೆತಡೆಗಳೇನು? ಕಲಿಕೆಯ ಪ್ರಕ್ರಿಯೆಯಲ್ಲಿ ಇನ್ನೂ ಹೆಚ್ಚು ಉತ್ಸಾಹದಿಂದ ಭಾಗವಹಿಸುವಂತೆ ಆಗಲು ಅವರಿಗೆ ವೈಯಕ್ತಿಕವಾಗಿ ಮತ್ತಾವ ಬೆಂಬಲ ನೀಡಬಹುದು?
- ಅವರ ಹಿನ್ನಲೆ ಹಾಗೂ ಕುಟುಂಬದ ಸ್ಥಿತಿಗತಿಗಳ ಬಗ್ಗೆ ಇನ್ನೂ ಹೆಚ್ಚು ತಿಳಿದುಕೊಳ್ಳಲು ನಿಮಗೆ ಅಗತ್ಯವೆನಿಸಬಹುದು. ಅವರ ತಾಯ್ತಂದೆಯರನ್ನು ಭೇಟಿಯಾಗುವ ಬಗ್ಗೆ ಆಲೋಚಿಸಿ. ತಮ್ಮ ಮಕ್ಕಳ ಬಗ್ಗೆ ಮಾತನಾಡಲು ಅವರಲ್ಲಿ ಯಾರಾದರೂ ನಿಮ್ಮನ್ನು ಬಳಿ ಬಂದಿದ್ದರೆ? ಶಾಲೆಯಲ್ಲಿ ಮಕ್ಕಳು ಅನುಭವಿಸುವ ಕಷ್ಟಗಳ ಬಗ್ಗೆ ಏನಾದರೂ ಹೇಳಿಕೊಂಡಿದ್ದಾರೆಯೆ? ತಮ್ಮ ಮಕ್ಕಳಿಗೆ ಏನು ಬೇಕು ಎನ್ನುವುದನ್ನು ಹೇಲಿಕೊಂಡಿದ್ದಾರೆಯೆ?
- ಆ ಮಕ್ಕಳೊಂದಿಗೆ ಶಾಲೆಯಲ್ಲಿ ಅವರ ಕಲಿಕೆ ಹೇಗಿದೆ, ಅನುಭವಗಳು ಹೇಗಿವೆ ಎನ್ನುವುದರ ಬಗ್ಗೆ ಮಾತನಾಡುವ ಅವಕಾಶವನ್ನು ಕಲ್ಪಿಸಿ. ಇದನ್ನು ವೈಯಕ್ತಿಕವಾಗಿ ಮಾಡಬೇಕೋ ಗುಂಪುಗಳಲ್ಲಿ ಮಾಡಬೇಕೋ ಎಂಬುದರ ಎಚ್ಚರವಹಿಸಿ. ಅವರು ಏನು ಹೇಳಿದ್ದಾರೆ ಎನ್ನುವುದು ಇತರರಿಗೆ ಗೊತ್ತಾಗುವುದಿಲ್ಲ ಎಂಬ ಭರವಸೆಯನ್ನಿತ್ತು, ಅವರು ಮುಕ್ತವಾಗಿ ಆರಾಮವಾಗಿ ನಿಮ್ಮಲ್ಲಿ ಎಲ್ಲವನ್ನೂ ಹೇಳಿಕೊಳ್ಳಲು ಸಾಧ್ಯವಾಗುವಂತಹ ಪರಿಸರವನ್ನು ಕಲ್ಪಿಸಿ. ಮಕ್ಕಳೊಂದಿಗೆ ಮುಖಾಮುಖಿ ಚರ್ಚಿಸುವುದೇ ಒಳಿತು. ಆಗ ಮಾತ್ರ ಅವರ ಸಾಕ್ಷಾತ್ ಅನುಭವವನ್ನು ಹೇಳಿಕೊಂಡಾರು, ಅವರಿಗೆ ಏನು ಸಹಕಾರಗಳು ಬೇಕೆಂಬುದನ್ನೂ ಹೇಳಿಕೊಂಡಾರು.

ಚರ್ಚೆ:

ಪ್ರತಿಯೊಬ್ಬ ವಿದ್ಯಾರ್ಥಿಯ ವೈಯಕ್ತಿಕ ಶಿಕ್ಷಣದ ಕೈಪಿಡಿಯನ್ನು ನೀವು ತಯ್ಯಾರು ಮಾಡುತ್ತಿದ್ದೀರಿ. ಈ ಮಕ್ಕಳಲ್ಲಿ ಕೆಲವು ಸಮಾನವಾದ ಅಂಶಗಳು ಇದ್ದರೂ, ಎಲ್ಲರೂ ಒಂದೇ ಎಂದು ಬಗೆಯುವುದು ಸರಿಯಲ್ಲ. ಒಬ್ಬಬ್ಬರಿಗೂ ತಮ್ಮ ಕಲಿಕೆಯ ಉತ್ಸಾಹ ಹಾಗೂ ನಿಷ್ಠೆಯನ್ನು ಪ್ರಭಾವಗೊಳಿಸುವ ಬೇರೆ ಅಂಶಗಳಿರಬಹುದು. ಹಾಗಾಗಿ ಸಮಾನವಾದ ಅಂಶಗಳು ಕಾಣಬಂದರೂ, ಎಲ್ಲರ ಸಮಸ್ಯೆಗಳಿಗೂ ಒಂದೇ ಪರಿಹಾರ ಸಿಕ್ಕೀತು ಎಂದು ನಿರೀಕ್ಷಿಸಬೇಡಿ.

ನಿಮ್ಮ ಶಾಲೆಯಲ್ಲಿನ ಯಾವುದೋ ಒಂದು ಭೇದರಾಹಿತ್ಯ ಸಂಬಂದಿತ ಸಮಸ್ಯೆಯ ಬಗ್ಗೆ ವಿವರವಾಗಿ ಚಿಂತಿಸಿರಿ, ಇಂತಹ ವರ್ಗದ ಮಕ್ಕಳ ಸಾಧನ ಮತ್ತು ಯಶಸ್ಸುಗಳಲ್ಲಿ ಯಾವ ಅಡೆತಡೆಗಳಿವೆ ಎನ್ನುವುದು ನಿಮಗೆ ಈಗಾಗಲೇ ಚೆನ್ನಾಗಿ ಅರ್ಥವಾಗಿರಬೇಕು. ಇದಕ್ಕೆ ಸಂಬಂಧಿಸಿದಂತೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದೂ ನೀವು ಗುರುತಿಸಿಕೊಂಡಿರಬೇಕು. ಭೇದರಾಹಿತ್ಯದ ಶೈಕ್ಷಣಿಕ ಪರಿಸರವನ್ನು ನಿರ್ಮಿಸುವ ವಿಷಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳು ನಿಮ್ಮ ಹಿನ್ನಲೆಗೆ ನಿರ್ದಿಷ್ಟವಾದುದಾಗಿರಬಹುದು:

- ವಿದ್ಯಾರ್ಥಿ ಹಾಗೂ ಶಿಕ್ಷಕರ ನಡುವೆ ಜೊತೆಗಾರರೆಂಬ ಬಲವಾದ ಭವಾನೆಯನ್ನು ಮೂಡಿಸುವುದು ಹೇಗೆ ಎಂಬುದರತ್ತ ಗಮನ ಹರಿಯಿಸುವುದು ಈ ನಿಟ್ಟಿನಲ್ಲಿ, ವಿದ್ಯಾರ್ಥಿಗಳು ತಮ್ಮ ಕಷ್ಟವನ್ನು ವ್ಯಕ್ತಪಡಿಸುವಂತೆ ಮಾಡುವುದೂ ಒಂದಾಗಿದೆ- ವಿದ್ಯಾರ್ಥಿಗಳ ಪಾಲಿಗೆ ಕಲಿಯುವ ಅನುಭವ ಹೇಗಿದೆ ಎನ್ನುವುದು ಶಿಕ್ಷಕರಿಗೆ ಅರ್ಥವಾಗುತ್ತದೆ- ವಿದ್ಯಾರ್ಥಿಗಳಿಂದ ಪ್ರತಿಸ್ಪಂದನವನ್ನು ಸಂಗ್ರಹಿಸುವ ವಿಷಯದಲ್ಲಿ ಶಿಕ್ಷಕರು ಹೆಚ್ಚು ಸಕ್ರಿಯವಾಗಿರುವುದಕ್ಕೂ ಅನುಕೂಲ.
- ತಮ್ಮ ಕಲಿಕೆಯ ಮೇಲೆ ನಕಾರಾತ್ಮಕ ಪ್ರಭಾವವನ್ನು ಬೀರುವ ವೈಯಕ್ತಿಕ ಕಾರಣಗಳನ್ನು ವಿದ್ಯಾರ್ಥಿಗಳೇ ಹೇಳಿಕೊಳ್ಳುವಂತಹ ವ್ಯವಸ್ಥೆಗಳನ್ನು ನಿರ್ಮಿಸಬೇಕು.
    - ವಿದ್ಯಾರ್ಥಿಗಳೆಲ್ಲ ಪೂರ್ಣವಾಗಿಯೂ ಪ್ರಭಾವಶಾಲಿಯಾಗಿಯೂ ಕಲಿಯಲು ಸಾಧ್ಯವಾಗುವಂತೆ ಅಧ್ಯಾಪನದ ಶೈಲಿಯನ್ನೂ, ಪಾಠ್ಯೋಪಕರಣಗಳನ್ನೂ ಹಾಗೂ ಮೌಲ್ಯಮಾಪನ ಪದ್ಧತಿಯನ್ನೂ ರೂಪಿಸಬೇಕು.
    - ವಿದ್ಯಾರ್ಥಿಗಳಿಗೆ ಸುರಕ್ಷೆಯ ಭಾವ, ಬೆಂಬಲ ಹಾಗೂ ಯಶಸ್ವಿಯಾಗಲು ಹೆಚ್ಚಿನ ಅವಕಾಶಗಳನ್ನು ಒದಗಿಸುವಂತಹ ಶಾಲಾ ಪರಿಸರವನ್ನು ನಿರ್ಮಿಸುವಂತಹ ಬದಲಾವಣೆಗಳನ್ನು ತರುವುದು.
    - ಶಾಲೆಯ ಒಟ್ಟಾರೆ ಸಂಸ್ಕೃತಿಗೆ ನಕಾರಾತ್ಮಕ ಛಾಯೆ ತರುವಂತಹ ಮನೋಭಾವ ಹಾಗೂ ವರ್ತನೆಗಳನ್ನು ನಿಗ್ರಹಿಸುವುದು. ನಡೆನುಡಿಗಳನ್ನೂ, ವಿದ್ಯಾರ್ಥಿಗಳನ್ನು ಕರೆಯುವ, ಮಾತನಾಡಿಸುವ ರೀತಿ ಇರಬಹುದು (ಸಾಮಾಜಿಕ-ಆರ್ಥಿಕವಾಗಿ ಕೆಳಮಟ್ಟದ ವಿದ್ಯಾರ್ಥಿಗಳು ಹೆಚ್ಚು ಸಾಧನೆ ಮಾಡಲು ಸಾಧ್ಯವೇ ಇಲ್ಲ, ಅದೇ ನಿಯಮ ಎಂಬ ಧೋರಣೆ), ಪ್ರಶಸ್ತಿ-ಕಾಣಿಕೆಗಳನ್ನು ಕೊಡುವಾಗ

ಭೇದ (ಕೇವಲ ಕ್ರೀಡೆಗಳಿಗೆ ಮಾತ್ರ ಪ್ರಶಸ್ತಿ ಕೊಡುವುದು, ಅತಹ್ವಾ ಕೇವಲ ಗಂಡುಮಕ್ಕಳಿಗೆ ಕೊಡುವುದು)- ಇವನ್ನೆಲ್ಲ ತಿದ್ದಬೇಕಾಗುತ್ತದೆ.

## ಚಟುವಟಿಕೆ 7: ಭೇದರಾಹಿತ್ಯವನ್ನು ಜಾರಿಗೆ ತರಲು ವ್ಯವಸ್ಥಿತ ಯೋಜನೆಯನ್ನೇ ಹೂಡುವುದು

ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಅಲ್ಪಸಂಖ್ಯರ ಪಂಗಡದ ಹೆಣ್ಣುಮಕ್ಕಳ ವಿಷಯದಲ್ಲಿ ಆಗುವ ಭೇದಭಾವವನ್ನೇ ಉದಾಹರಣೆಯನ್ನೇ ತೆಗೆದುಕೊಂಡು ನೀವು ಯೋಜನೆ ಹೂಡಬೇಕು ಅಥವಾ ನೀವು ನಿಮ್ಮ ಶಾಲೆಯಲ್ಲಿ ಗುರುತಿಸಿದ ಅಂತಹದ್ದೇ ಯುವುದೋ ವರ್ಗವನ್ನೂ ತೆಗೆದುಕೊಳ್ಳಬಹುದು.

- ವಿವಿಧವರ್ಗಗಳ ಮಕ್ಕಳನ್ನು ಗುರುತುಮಾಡುವ ಕೆಲಸವನ್ನು ನಿಮ್ಮ ಶಿಕ್ಷಕರಿಗೆ ವಹಿಸಿ. ಯೋಜನೆಗೆ ಪೂರಕವಾಗಿ ಯಾವ ಮಾಹಿತಿಯನ್ನು ಸಂಗ್ರಹಿಸಬೇಕು ಎನ್ನುವುದನ್ನು ಚರ್ಚಿಸಿರಿ. ಅದನ್ನು ಹೇಗೆ ಸಂಗ್ರಹಿಸಬೇಕು ಎನ್ನುವುದನ್ನೂ ವಿವರಿಸಿ (ವ್ಯವಹಾರದ ಮೂಲಕ, ಗಮನಿಸುವುದರ ಮೂಲಕ, ಪೋಷಕರ ಮೂಲಕ ಅಥವಾ ಇತರೇ), ಹೇಗೆ ದಾಖಲಿಸಬೇಕು ಎನ್ನುವುದನ್ನೂ ತಿಳಿಸಿಕೊಡಿ.
- ನೀವು ಸಂಗ್ರಹಿಒಸಿದ ಮಾಹಿತಿಯನ್ನೆಲ್ಲ ಸೇರಿಸಿ ಸಮೂಹ ದೃಷ್ಟಿಕೋನವನ್ನು ಬೆಳೆಸಿ, ತನ್ಮೂಲಕ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಆ ಹೆಣ್ಣುಮಕ್ಕಳ ಕಲಿಕೆಯ ಪರಿಣಾಮಗಳು ಹೇಗೆ ಬದಲಾಗಬೇಕು ಎನ್ನುವುದನ್ನು ಅಧ್ಯಯನ ಮಾಡಿ.
- ಈ ವಿದ್ಯಾರ್ಥಿಗಳ ಜೊತೆಯಲ್ಲಿ, ಕೇವಲ ಗುಂಪುಗಳಲ್ಲಲ್ಲ, ಆದರೆ ವೈಯಕ್ತಿಕವಾಗಿ ಹೇಗೆ ಕಾರ್ಯಮಾಡಬಹುದು, ಅವರ ಪೋಷಕರನ್ನೂ ನಿಮ್ಮ ಸಿಬ್ಬಂದಿಯನ್ನೂ ಹೇಗೆ ಸೇರಿಸಿಕೊಳ್ಳಬಹುದು ಎನ್ನುವುದರ ಬಗ್ಗೆ ಯೋಜನೆ ಹೂಡಿ. ಈ ವಿಷಯವಾಗಿ ನಿಮಗೆ ಸಲಹೆ ಕೊಡಬಲ್ಲವರು ಬೇರೆ ಯಾರಾದರೂ ಇದ್ದಾರೇನು?
- ಹೆಣ್ಣುಮಕ್ಕಳ, ಪೋಷಕರ ಹಾಗೂ ಸಿಬ್ಬಂದಿಯ ಪ್ರೇರೇಪಣೆ, ಕೌಶಲ ಹಾಗೂ ಮನೋಭಾವಗಳ ಉನ್ನತಿಯ ಮೂಲಕ ನಿಮ್ಮ ಲಕ್ಷ್ಯವನ್ನು ಸಾಧಿಸುವ ಹಾದಿಯಲ್ಲಿನ ಅಡೆತಡೆಗಳೇನು ಎನ್ನುವುದನ್ನು ಗುರುತಿಸಿ.
- ಈ ಕೌಶಲ, ಪ್ರೇರಣೆ ಹಾಗೂ ಮನೋಭಾವಗಳನ್ನು ಕಟ್ಟುವುದು ಹೇಗೆ ಎನ್ನುವುದನ್ನೂ ಗುರುತಿಸಿಕೊಳ್ಳಿ. ಇದಕ್ಕೆ ಬೇಕಾಗುವ ಸಂಪನ್ಮೂಲಗಳನ್ನೂ ಗೆದ್ದುಕೊಳ್ಳಿ.
- ಅಂತ್ಯದಲ್ಲಿ ಪ್ರಗತಿ ಹಾಗೂ ಮೌಲ್ಯಮಾಪನವನ್ನು ಪರೀಕ್ಷಿಸುವಂತಹ ವಸ್ತಿತ ವಿನ್ಯಾಸವನ್ನಿಟ್ಟುಕೊಳ್ಳಿ.
- ಪ್ರಗತಿ, ಪ್ರತಿಕ್ರಿಯೆ ಹಾಗೂ ಕಾರ್ಯಸಮೀಕ್ಷೆಯನ್ನು ಪರಾಂಬರ್ರೈಸಲು ಕಾಲಕಾಲಕ್ಕೂ ಸಮಾಲೋಚನೆಗಳನ್ನು ನಡೆಸಿ. (meetings)

  ಇದು ನೀವೊಬ್ಬರೇ ಮಾಡುವ ಚಟುವಟಿಕೆಯಲ್ಲ. ಇದರಲ್ಲಿ ಇತರರೂ ಸೇರಬೇಕಾಗುತ್ತದೆ, ಅಷ್ಟೇ ಅಲ್ಲ ಶಾಲೆಯೇ ಸೇರಬೇಕಾಗುತ್ತದೆ. ಸಂಬಂಧಿತ ವಿದ್ಯಾರ್ಥಿಗಳೂ ಸೇರುವಂತೆ ಮಾಡಬಹುದು, ಅಥವಾ ಅನುಕೂಲವಿದ್ದರೆ ವಿದ್ಯಾರ್ಥಿ ಮಂಡಲಿಯೊಂದನ್ನು ಸ್ಥಾಪಿಸಬಹುದು. ಅಥವಾ ಆ ಸಮುದಾಯದ ಸಮಸ್ಯೆಗಳನ್ನು ಅರಿತಿರುವ ಸಮುದಾಯ ತಜ್ಞರ ಸಲಹೆಯನ್ನು ಪಡೆಯಬಹುದು. ತನ್ಮೂಲಕ ಆ ಸಮುದಾಯವೇ ಭಾಗವಹಿಸುವಂತೆಯೂ ಆಗಬಹುದು.

### 5 ಮೌಲ್ಯಮಾಪನದ ಪ್ರಭಾವ

ನಿಮ್ಮ ಶಾಲೆಯಲ್ಲಿ ಸಮಾನತೆಗೆ ಸಂಬಂಧಿಸಿದಂತೆ ಯಾವುದೇ ಸವಾಲನ್ನು ತೆಗೆದುಕೊಳ್ಳುವಾಗ ಆಧಾರಭೂತವಾದ ಸಿದ್ಧಾಂತವನ್ನು ಪ್ರಾರಂಭಿಕವಾದ ವಿಚಾರವಾಗಿ ಯೋಜಿಸಿಕೊಳ್ಳಬೇಕು. ಈ ಆಧಾರಭೂತ ಸಿದ್ಧಾಂತವು ಆಯಾ ಸಂದರ್ಭದ ಪ್ರಾಮಾಣಿಕ ಹಾಗೂ ವಾಸ್ತವಿಕ ಸಮೀಕ್ಷೆಯಾಗಿರಬೇಕು. ಅದು ನೀವು ಎದುರಿಸಲಿಚ್ಛಿಸುವ ಪ್ರಚಲಿತ ಭೇದಭಾವಗಳ ಮಟ್ಟ ಹಾಗೂ ಸ್ವರೂಪಗಳನ್ನು ಸಮೀಕರಿಸುವಂತಿರಬೇಕು. ಆ ಬಳಿಕ ನೀವು ನಿಮ್ಮ ಕಾರ್ಯತಂತ್ರಗಳ ಹಾಗೂ ಸಂಪನ್ಮೂಲಗಳ ಪ್ರಗತಿಯನ್ನು ಗಣಿಸಲಾರಂಭಿಸಬಹುದು. ಏಕೆಂದರೆ ನಿಮ್ಮ ಆಧಾರಭೂತ ಸಿದ್ಧಾಂತವನ್ನು ಹಿಡಿದು ಈ ಎಲ್ಲವನ್ನು ನಿದರ್ಶಿಸಲು ನಿಮಗೆ ಸಾಧ್ಯವಾಗುತ್ತದೆ.

ನಿಮ್ಮ ಕಾರ್ಯತಂತ್ರಗಳ ಮೌಲ್ಯಮಾಪನವು ಎರಡು ರೂಪಗಳನ್ನು ತಾಳುತ್ತದೆ:

ಮಾಹಿತಿಯ ಶೋಧನೆ (ಹಾಜರಾತಿ ಹಾಗೂ ಫಲಿತಾಂಶಗಳನ್ನು ಒಳಗೊಂಡಿರುತ್ತದೆ) ಹಾಗೂ ಆ ತಂಡಗಳ ಅನುಭವಗಳ ಮಾಹಿತಿ. ಉದಾಹರಣೆಗೆ 'ಆರ್ಥಿಕವಾಗಿ ಕೆಳಮಟ್ಟದಲ್ಲಿರುವ ಅಲ್ಪಸಂಖ್ಯ ಪಂಗಡಗಳ ಹೆಣ್ಣು ಮಕ್ಕಳನ್ನೇ ನೀವು ಪರಿಗಣಿಸಿದರೆ, ಶಿಕ್ಷಣಕ್ಕೆ ಅವರಿಗಿರುವ ಅವಕಾಶ ಹಾಗೂ ಅದರ ಬಗ್ಗೆ ಜಾಗೃತಿ ಎಷ್ಟಷ್ಟರ ಮಟ್ಟಿಗಿದೆ ಎನ್ನುವುದನ್ನು ಆ ಹೆಣ್ಣುಮಕ್ಕಳೇ ಬರಬರುತ್ತ ಹೆಚ್ಚು ಮುಕ್ತವಾಗಿ ಮಾತನಾಡಲಾರಂಭಿಸುತ್ತಾರೆ. ಏಕೆಂದರೆ ಅವರ ಮಾತನ್ನು ಆಲಿಸುವವರಿದ್ದಾರೆ, ಗಮನಿಸುವವರಿದ್ದಾರೆ, ಗೌರವಿಸುವವರಿದ್ದಾರೆ ಎನ್ನುವ ಭರವಸೆ ಉದಿಸುತ್ತದೆ. ಮಾಹಿತಿಯ ಸಮೀಕ್ಷೆಯ ಪ್ರಕಾರ ಅವರ ಶೈಕ್ಷಣಿಕ ಪ್ರಗತಿಯೂ ಹೆಚ್ಚಿರಬಹುದು.

ಭೇದರಾಹಿತ್ಯನ್ನು ಉಳಿಸುತ್ತಲೇ ಸಾಕ್ಷಿಗಳನ್ನು ಹೇಗೆ ಸಂಗ್ರಹಿಸಬಲ್ಲಿರಿ ಎನ್ನುವುದನ್ನು ಆಲೋಚಿಸಿ. ವಿದ್ಯಾರ್ಥಿಗಳನ್ನೇ ಮಾತನಾಡಿಸಬಹುದು, ಅಥವಾ ಅವರು ಪರಸ್ಪರ ಸಂದರ್ಶನ ಮಾಡುವಂತೆ ಮಾಡಿ ಆ ವರದಿಯನ್ನು ನಿಮಗೆ ಕೊಡುವಂತೆ ಮಾಡಬಹುದು. ಮೌಲ್ಯಮಾಪನದ ಉದ್ದೇಶ ನಾವು ಕೈಗೊಂಡಿರುವ ಕಾರ್ಯತಂತ್ರಗಳು ಫಲಿಸಿವೆಯೇ ಇಲ್ಲವೆ ಎನ್ನುವುದನ್ನು ಗಮನಿಸುವುದಷ್ಟೇ ಅಲ್ಲ, ನಿಮಗೂ ಆ ಪ್ರಕ್ರಿಯೆಯಿಂದ

ಕಲಿಯುವುದಿರುತ್ತದೆ- ಪುನಃ ಅದೇ ಕೆಲಸವನ್ನು ಮಾಡುವಾಗ, ನೀವು ಯಾವ ಭಾಗವನ್ನು ಉತ್ತಮ ಪಡಿಸಿಕೊಳ್ಳಬೇಕು ಎನ್ನುವುದನ್ನು ಪರಾಂಬರಿಸಬಹುದು. ಶಾಲಾ ಪ್ರಗತಿಯ ಮೇಲೆ ಈ ಭೇದರಾಹಿತ್ಯವು ಪ್ರಭಾವ ಬೀರುವಂತಿದ್ದಲ್ಲಿ, ಅದೇ ಪ್ರಾಮುಖ್ಯತೆಯ ಅಂಶವಾಗುವುದು ಖಂಡಿತ. ಅದರ ಬದಲು ನೀವು ಒಂದೊಂದೇ ಕ್ರಮಗಳನ್ನು ತೆಗೆದುಕೊಳ್ಳುತ್ತ, ಮುಂದಿನ ಹೆಜ್ಜೆಗಳನ್ನು ಆಲೋಚಿಸುತ್ತ ಮುನ್ನಡೆಯಬಹುದು. ಹೀಗಾದಾಗ ಪ್ರಗತಿಯು ಪುನರಾವೃತ್ತಿಯಾಗುವ ಸಾಧ್ಯತೆ ಇದೆ.

ಇಂತಹ ದೀರ್ಘಕಾಲದ ಯೋಜನೆ ಹಾಗೂ ಮೌಲ್ಯ-ಸಮೀಕ್ಷೆಗಳನ್ನು ಮಾಡುವಾಗ ನಿಮ್ಮ ಸಿಬ್ಬಂದಿಯ ನಿಷ್ಠೆ ಹಾಗೂ ಉತ್ಸಾಹಗಳನ್ನು ಹಿಡಿದಿಟ್ಟುಕೊಳ್ಳಬೇಕಾಗುತ್ತದೆ, ಅವರ ಮೂಲಕ ಮನೋಭಾವಗಳನ್ನೂ ವರ್ತನೆಗಳನ್ನೂ ಉತಮ್ಮ ಪಡಿಸಬೇಕಾಗುತ್ತದೆ. ಪರಿಣಾಮಗಳನ್ನು ಸಿಬ್ಬಂದಿಯೊಂದಿಗೆ ಹಂಚಿಕೊಳ್ಳುವುದೂ ಮುಖ್ಯ. ಸಿಬ್ಬಂದಿಯ ಉತ್ಸಾಹವನ್ನು ಕಾಪಾಡುವುದೂ ಪ್ರೇರಣೆ ನೀಡುವುದೂ ಎಲ್ಲಕ್ಕಿಂತ ಮುಖ್ಯ.ಅಂತೆಯೇ ಅವರ ಮೇಲೆ ಆಗುತ್ತಿರುವ ಪ್ರಭಾವವನ್ನೂ ನೀವೂ ಗುರುತಿಸಿಕೊಳ್ಳುತ್ತಿರಿ ಎನ್ನುವುದೂ ಅವರಿಗೆ ಗೊತ್ತಾಗಬೇಕು. ಸಿಬ್ಬಂದಿಯೊಂದಿಗೆ ಪರಿಣಾಮಗಳನ್ನು ಹಂಚಿಕೊಳ್ಳುವುದು ಏಕಮುಖವಾದ ಪ್ರಕ್ರಿಯೆಯಾಗಬಾರದು. ಅವರೂ ಮೌಲ್ಯಮಾಪನದ ಪ್ರಕ್ರಿಯೆಗೆ ಯೋಗದಾನ ನೀಡಬೇಕು, ಮುಂದಿನ ಹೆಜ್ಜೆಗಳು ಏನಾಗಬೇಕು ಎನ್ನುವುದನ್ನು ನಿಮ್ಮೊಂದಿಗೆ ಕೂಡಿ ಸಮಾಲೋಚಿಸಬೇಕು. ಉದಾಹರಣೆಗೆ : ಅವರು ಕೇಳಬಹುದು: ಆಗುತ್ತಿರುವ ಬದಲಾವಣೆಗಳ ಬಗ್ಗೆ ಅವರ ಅಭಿಪ್ರಾಯವೇನು? ಆ ವಿದ್ಯಾರ್ಥಿಗಳ ಕಲಿಕೆಯ ಹೇಗೆ ತೊಡಗುತ್ತಿದ್ದಾರೆ?

ಭೇದರಾಹಿತ್ಯದ ಸಂಸ್ಕೃತಿಯನ್ನು ರೂಢಿಸಲು ಸಮಯ ಹಾಗೂ ಪ್ರಯತ್ನಗಳು ಬೇಕಾಗುತ್ತವೆ. ನೀವು ಈಗಾಗಲೆ ಪಡೆದಿರುವ ಯಶಸ್ಸಿನ ಕಥೆಗಳನ್ನು ಪ್ರಸಂಗಾಧ್ಯಯನಕ್ಕಾಗಿ ಬರೆದಿಟ್ಟು ಅದನ್ನು ಶಾಲೆಯಲ್ಲಿ ಹಂಚಿಕೊಳ್ಳುವುದು ಮುಖ್ಯ. ನಿಮಗೆ ಪ್ರಮುಖವೆನಿಸುವ ವಿಭಾಗದಲ್ಲೇ ಬೇರೆಯವರೂ ಮಾಡಿರಬಹುದಾದ ಪ್ರಯತ್ನ ಪ್ರಯೋಗಗಳನ್ನೂ ಅವರಿಂದ ಕಲಿಯಬಹುದು.

# ಸಾರಚಿಂತನೆ

**ನಿಮ್ಮ ಶಾಲೆಯಲ್ಲಿನ ಎಲ್ಲ ವಿದ್ಯಾರ್ಥಿಗಳೂ** ಸಮಾನವಾದ ಶೈಕ್ಷಣಿಕ ಅವಕಾಶಗಳನ್ನು ಪಡೆಯುವಂತೆಯೂ ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆಯೂ ಮಾಡಲು ನೀವು ಹೇಗೆ ಅವರ ವಿಭಿನ್ನತೆ ಹಾಗೂ ವ್ಯತ್ಯಾಸಗಳನ್ನು ನಿರ್ವಹಿಸಬಹುದು, ಪ್ರಯೋಗಶೀಲವಾಗಿ ಕೆಲಸಮಾಡಬಹುದು ಎನ್ನುವುದನ್ನು ಈ ಪಠ್ಯಭಾಗದಲ್ಲಿ ಕಲಿತಿದ್ದೀರಿ. ದೈನಂದಿನ ಜೀವನದಲ್ಲಿ ವಿದ್ಯಾರ್ಥಿಗಳು ಅನುಭವಿಸುವ ಭೇದಗಳನ್ನು ಎದುರಿಸುವುದು ದೊಡ್ಡ ಕೆಲಸವೇ ಸರಿ. ಆದರೆ ಶಾಲೆಗಳಲ್ಲಿ ಸಮಾನತೆಯನ್ನು ಅನುಷ್ಠಾನ ಮಾಡಲು ಸೂಕ್ತ್ ಅವಕಾಶವಿರುತ್ತದೆ. ತನ್ಮೂಲಕ ಅವರ ಜೀವನದಲ್ಲಿ ಭೇದರಾಹಿತ್ಯವನ್ನು ಕಲಿಸಲು ಬೇಕಾದ ಪರಿಸರವನ್ನು ನಿರ್ಮಿಸಲು ಸಾಧ್ಯ. ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳೆಲ್ಲ ಸೇರಿ ತಮ್ಮ ಸಹಮಾನವರನ್ನು ಗೌರವಿಸುವ ಭಾವವನ್ನು ಬೆಳೆಸಿಕೊಳ್ಳಬಹುದು.

ಶಾಲಾ ಶಿಕ್ಷಕರಾಗಿ ನೀವು ಬಹಳಷ್ಟು ಮಾಡಬಹುದು. ನೂರಾರು ವಿದ್ಯಾರ್ಥಿಗಳ ಜೀವನದಲ್ಲಿ ಬದಲಾವಣೆಯನ್ನು ತರಬಲ್ಲ ಹಾಗೂ ಅವರೆಲ್ಲರ ಸತ್ವಸಾಮರ್ಥ್ಯಗಳನ್ನು ಅಭಿವ್ಯಕ್ತಪಡಿಸುವ ಅವಕಾಶವನ್ನು ನಿಮ್ಮ ಸ್ಥಾನವೇ ನಿಮಗೆ ಕಲ್ಪಿಸುತ್ತದೆ. ಇದಕ್ಕೆ ಧೈರ್ಯ, ವಿಮರ್ಶಾತ್ಮಕ ಬುದ್ಧಿ, ಆಕಾಂಕ್ಷೆ ಹಾಗೂ ಪ್ರಾಮಾಣಿಕತೆಗಳು ಬೇಕಾಗುತ್ತವೆ. ಇವುಗಳು ತುಂಬ ದೊಡ್ಡ ಹೆಜ್ಜೆಗಳು ಎನಿಸಿದರೆ, ಚಿಕ್ಕ ಪ್ರಯತ್ನಗಳನ್ನೇ ಮೊದಲು ಕೈಗೆತ್ತಿಕೊಳ್ಳಬಹುದು. ಸಮಾನತೆ ಮತ್ತು ನ್ಯಾಯಗಳನ್ನು ಹೊಂದಿದ್ದು ನಿಮಗೆ ಹೆಮ್ಮೆಯನ್ನು ತರುವಂತಹ ಶಾಲೆಯನ್ನು ನಿರ್ಮಿಸಿ. ಅಂತಿಮ ಗುರಿಯು ನಿಮ್ಮ ಮನದಲ್ಲಿರಲಿ- 'UN Convention on the Rights of the Child (Article 29) ನ ಸಿದ್ಧಾಂತಗಳನ್ನು ಪಾಲಿಸುವಂತಹ ಶಾಲೆ ಹಾಗೂ ಸಮುದಾಯವನ್ನು ನಿರ್ಮಿಸಬೇಕು"

- ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವ, ಪ್ರತಿಭೆ ಹಾಗೂ ಸಾಮರ್ಥ್ಯಗಳನ್ನು ಪೂರ್ಣವಾಗಿ ಬೆಳೆಸಬೇಕು
- ಎಲ್ಲ ವಿದ್ಯಾರ್ಥಿಗಳ ಮಾನವ-ಹಕ್ಕುಗಳನ್ನು ಪ್ರೋತ್ಸಾಹಿಸಿ, ಅವರ ಹಾಗೂ ಇತರರ ಸಂಸ್ಕೃತಿಗಳನ್ನು ಗೌರವಿಸುವಂತೆ ಮಾಡಬೇಕು
- ಈ ಪಠ್ಯಭಾಗವು 'ಕಲಿಯುವ-ಕಲಿಸುವ ಪ್ರಕ್ರಿಯೆಗಳಲ್ಲಿ ಬದಲಾವಣೆಯನ್ನು ತರುವ ಪ್ರಧಾನ ಕಾರ್ಯ'ಕ್ಕೆ ಸಂಬಂಧಿಸಿದ ಪಠ್ಯಸಮೂಹಕ್ಕೆ ಸೇರಿದ್ದು. (National College of School Leadership) ಗೆ ಸಂಬಂಧಿಸಿದ್ದು. ನಿಮ್ಮ ಕೌಶಲ ಹಾಗೂ ಸಾಮರ್ಥ್ಯಗಳನ್ನು ವರ್ಧಿಸಿಕೊಳ್ಳಲು ಇರುವ ಮುಂದಿನ ಪಠ್ಯಭಾಗಗಳನ್ನು ಅವಲೋಕಿಸಲು ಇದು ಸಹಾಯಕವಾಗಬಹುದು.
- ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ಹಾಗೂ ಕಲಿಸುವ ಶೈಲಿಗಳನ್ನು ಉತ್ತಮಪಡಿಸುವ ನೇತೃತ್ವ ನ್ನು ವಹಿಸುವುದು.
- ಮಾಧ್ಯಮಿಕ ಶಾಲೆಯಲ್ಲಿ ಕಲಿಯುವ ಹಾಗೂ ಕಲಿಸುವ ಶೈಲಿಗಳನ್ನು ಉತ್ತಮಪಡಿಸುವ ನೇತೃತ್ವವನ್ನು ವಹಿಸುವುದು.
- ನಿಮ್ಮ ಶಾಲೆಯ ಮೌಲ್ಯಮಾಪನದ ನೇತೃತ್ವವನ್ನು ವಹಿಸುವುದು
- ಪ್ರಗತಿಯನ್ನು ಸಾಧಿಸಲು ಶಿಕ್ಷಕರಿಗೆ ಬೆಂಬಲ ನೀಡುವುದು

- ಶಿಕ್ಷಕರ ವೃತ್ತಿಪರ ಬೆಳವಣಿಗೆಯ ನೇತೃತ್ವವನ್ನು ವಹಿಸುವುದು
- ಆಪ್ತಸಲಹೆ ಹಾಗೂ ಮಾರ್ಗದರ್ಶನ
- ಕಲಿಯುವ ಉತ್ತಮ ಸಂಸ್ಕೃತಿಯನು ನಿಮ್ಮ ಶಾಲೆಯಲ್ಲಿ ನಿರ್ಮಿಸುವುದು
- ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನದ ಬಳಕೆಯ ನೇತೃತ್ವವನ್ನು ವಹಿಸುವುದು

# ಸಂಪನ್ಮೂಲಗಳು

**ಸಂಪನ್ಮೂಲ ೧: ಎಲ್ಲರನ್ನೂ ಸೇರುವಂತೆ ಮಾಡುವುದು**

**'ಎಲ್ಲರನ್ನೂ ಸೇರುವಂತೆ ಮಾಡುವುದು' ಎಂದರೇನು?**

ತರಗತಿಯಲ್ಲಿ ಸಾಂಸ್ಕೃತಿಕ ಹಾಗೂ ಸಾಮಜಿಕ ವಿಭಿನ್ನತೆಗಳು ಅಭಿವ್ಯಕ್ತವಾಗುತ್ತವೆ. ವಿದ್ಯಾರ್ಥಿಗಳಿಗೆ ವಿವಿಧ ಭಾಷೆ, ಆಸಕ್ತಿ ಹಾಗೂ ಸಾಮರ್ಥ್ಯಗಳ ಹಿನ್ನಲೆ ಇರುತ್ತದೆ. ವಿವಿಧ ಸಮಾಜಿಕ ಹಾಗೂ ಆರ್ಥಿಕ ಹಿನ್ನಲೆಗಳಿರುತ್ತವೆ. ಈ ವಿಭಿನ್ನತೆಗಳನ್ನು ಉದಾಸೀನ ಮಾಡಲಾಗದು. ನಿಜಕ್ಕೂ ಈ ವಿಭಿನ್ನತೆಗಳನ್ನು ಆಸ್ವಾದಿಸಬೇಕು, ಪರಸ್ಪರರಿಂದ ಕಲಿಯಲು ಇವೆಲ್ಲ ಉತ್ತಮ ಸಾಧನಗಳೇ ಆಗುತ್ತವೆ, ನಮ್ಮ ಅನುಭವದ ಲೋಕದ ಆಚೆಗೂ ಕಲಿಯಲು ಅವಕಾಶವನ್ನು ಕಲ್ಪಿಸುತ್ತವೆ. ಅವರ ಸ್ಥಿತಿಗತಿ, ಸಾಮರ್ಥ್ಯ ಹಾಗೂ ಹಿನ್ನಲೆ ಏನೇ ಇರಲಿ, ಎಲ್ಲ ಮಕ್ಕಳಿಗೂ ಶಿಕ್ಷಣಕ್ಕೆ ಸಮಾನ ಅವಕಾಶವಿದೆ. ಇದನ್ನೇ ಭಾರತದ ಕಾನೂನು ಹಾಗೂ ಅಂತರಾಷ್ಟ್ರೀಯ ಮಾನವ ಹಕ್ಕುಗಳೂ ಸಮರ್ಥಿಸುತ್ತವೆ. ದೇಶವನ್ನು ಮೊಟ್ಟಮೊದಲು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಜಾತಿ, ಲಿಂಗ ಆರ್ಥಿಕ ಸ್ಥಿತಿಗಳನ್ನು ಗಣಿಸದೇ ಎಲ್ಲ ಭಾರತೀಯ ಪ್ರಜೆಗಳನ್ನು ಸಮಾವಾಗಿ ಗೌರವಿಸುವುದನ್ನು ಒತ್ತಿ ಹೇಳಿದರು. ಈ ನಿಟ್ಟಿನಲ್ಲಿ ಶಾಲೆ ಹಾಗೂ ಶಿಕ್ಷಕರಿಗೆ ದೊಡ್ಡ ಜವಾಬ್ದಾರಿಯೇ ಇದೆ. ತಿದ್ದದೇ ಉಳಿದಿರುವ ಅಥವಾ ಪರಿಷ್ಕಾರವಾಗದಿರುವ ಹಲವಾರು ಪೂರ್ವಾಗ್ರಹಗಳು ನಮ್ಮಲ್ಲಿ ಇರಬಹುದು. ಹಾಗಾಗಿ ನೀವು ವಿದ್ಯಾರ್ಥಿಗಳ ಮೇಲೆ ಸಕಾರಾತ್ಮಕ ಅಥವಾ ನಕಾರಾತ್ಮಕ ಪ್ರಭಾವವನ್ನು ಬೀರಲು ಶಕ್ತರು. ನಿಮಗೆ ತಿಳಿದೋ ತಿಳಿಯದೆಯೋ ನಿಮ್ಮ ಸುಪ್ತ ಪೂರ್ವಾಗ್ರಹಗಳು ವಿದ್ಯಾರ್ಥಿಗಳ ಕಲಿಯುವ ಪ್ರಕ್ರಿಯೆಯನ್ನು ಪ್ರಭಾವಗೊಳಿಸಬಹುದು. ವಿದ್ಯಾರ್ಥಿಗಳನ್ನು ಭೇದ ಮಾಡದಂತೆ ನೀವು ಹೆಜ್ಜೆಗಳನ್ನು ಇಡಬೇಕಾಗುತ್ತದೆ.

ಎಲ್ಲರೂ ಕಲಿಯುವುದರಲ್ಲಿ ತೊಡಗುವಂತೆ ಮಾಡಲು ಮೂರು ಮುಖ್ಯ ಸಿದ್ಧಾಂತಗಳು

- **ಗಮನಿಸುವುದು**: ಪ್ರಭಾವಶಾಲೀ ಶಿಕ್ಷಕರು ಚೆನ್ನಾಗಿ ಗಮನಿಸುತ್ತಾರೆ, ವಿದ್ಯಾರ್ಥಿಗಳಲ್ಲಿನ ಬದಲಾವಣೆಗಳನ್ನು ಚೆನ್ನಾಗಿ ಗ್ರಹಿಸುವವರೂ ಸಂವೇದನಶೀಲರೂ ಆಗಿರುತ್ತಾರೆ. ನೀವು ಗಮನಿಸುವವರಾದರೆ, ವಿದ್ಯಾರ್ಥಿ ಪ್ರಗತಿ ಸಾಧಿಸುವುದನ್ನೂ, ಅವರಿಗೆ ಯಾವಾಗ ಸಹಾಯ ಬೇಕು ಎನ್ನುವುದನ್ನೂ ಹಾಗೂ ಇತರರಿಂದಿಗೆ ಹೇಗೆ ವರ್ತಿಸುತ್ತಾರೆ ಎನ್ನುವುದನ್ನೂ ಗಮನಿಸುತ್ತೀರಿ. ವಿದ್ಯಾರ್ಥಿಗಳ ಮನೆಯ ಪರಿಸ್ಥಿತಿ ಅಥವಾ ಇತರ ವಿಚಾರಗಳನ್ನು ಸೂಚಿಸುವಂತಹ ವ್ಯತ್ಯಾಸಗಳನ್ನೂ ಅವರಲ್ಲಿ ನೀವು ಗಮನಿಸುತ್ತೀರಿ. ಭೇದಕ್ಕೆ ಒಳಪಟ್ಟಿರುವ ಅಥವಾ ಭಾಗವಹಿಸಲು ಹಿಂಜರಿಯುವ ವಿದ್ಯಾರ್ಥಿಗಳನ್ನು ದಿನಂ ಪ್ರತಿಯೂ ಗಮನಿಸುವುದೂ ಭೇದರಾಹಿತ್ಯದ ಪ್ರಕ್ರಿಯೆಯಲ್ಲಿ ಸೇರುತ್ತದೆ.
- **ಸ್ವಾಭಿಮಾನದ ಮೇಲೆ ಗಮನ** : ತಾವು ಹೇಗಿದ್ದಾರೋ ಅದರ ಬಗ್ಗೆ ಸಂತೋಷವಾಗಿರುವುದೇ ಉತ್ತಮ ಪ್ರಜೆಗಳ ಲಕ್ಷಣ. ಏಕೆಂದರೆ ಅವರಿಗೆ ಸ್ವಾಭಿಮಾನವಿರುತ್ತದೆ, ತಮ್ಮ ಸಾಮರ್ಥ್ಯ ಹಾಗೂ ಕುಂದುಗಳನ್ನು ಅವರು ಅರಿತಿರುತ್ತಾರಲ್ಲದೆ, ತಮ್ಮ ಹಿನ್ನಲೆ ಹೇಗೇ ಇರಲಿ, ಇತರರೊಂದಿಗೆ ಸಕಾರಾತ್ಮಕ ಸಂಬಂಧಗಳನ್ನು ಬೆಳೆಸಿ ಕೊಳ್ಳಬಲ್ಲವರಾಗಿರುತ್ತಾರೆ. ಅವರು ತಮ್ಮನ್ನೂ ಇತರರನ್ನೂ ಗೌರವಿಸುತ್ತಾರೆ. ಶಿಕ್ಷಕರಾಗಿ ಕಿರಿಯ ವ್ಯಕ್ತಿಯ ಮೇಲೆ ನೀವು ಪ್ರಭಾವ ಬೀರಬಲ್ಲಿರಿ. ಆ ಶಕ್ತಿಯ ಅರಿವು ನಿಮಗಿರಲಿ. ಆ ಶಕ್ತಿಯನ್ನು ವಿದ್ಯಾರ್ಥಿಗಳಲ್ಲಿ ಸ್ವಾಭಿಮಾನವನ್ನು ನಿರ್ಮಿಸಲು ಬಳಸಿ,
- **ಸಡಿಲತೆ (Flexibility):** ಕೆಲವು ಗುಂಪುಗಳ ವಿಷಯದಲ್ಲಿ ನಿಮ್ಮ ಕಾರ್ಯತಂತ್ರ ಸಡಿಲವಾಗುತ್ತಿಲ್ಲ ಎಂದೆನಿಸಿದರೆ ಆ ಕಾರ್ಯವನ್ನು ನಿಲ್ಲಿಸಲು ಹಾಗೂ ಬದಲಾಯಿಸಲು ತಯಾರಾಗಿರಿ. ಇಂತಹ ಸಡಿಲತೆ ಔದಾರ್ಯಗಳಿದ್ದರೆ, ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ಸುಲಭವಾಗುತ್ತದೆ.

**ಎಲ್ಲ ಕಾಲದಲ್ಲೂ ಬಳಸಬಹುದಾದ ಕಾರ್ಯವಿಧಾನಗಳು**

- **ಉತ್ತಮ ವರ್ತನೆಯನ್ನು ಸ್ವತಃ ಪಾಲಿಸುವುದು:** ಮತ, ಜಾತಿ ಹಾಗೂ ಲಿಂಗಭೇದವನ್ನು ಎಣಿಸದೇ ಸ್ವತಃ ನೀವೇ ನಿಮ್ಮ ವಿದ್ಯಾರ್ಥಿಗಳ ಪಾಲಿಗೆ ಆದರ್ಶಪ್ರಾಯರಾಗಿರಿ. ಎಲ್ಲ ವಿದ್ಯಾರ್ಥಿಗಳನ್ನೂ ಸಮಾನವಾಗಿ ಕಾಣಿರಿ ಹಾಗೂ ನಿಮ್ಮ ಅಧ್ಯಾಪನದ ಮೂಲಕವೂ ಅದೇ ಭಾವವನ್ನು ಬಿತ್ತರಿಸಿರಿ.

ಎಲ್ಲರನ್ನೂ ಗೌರವದಿಂದ ಮಾತನಾಡಿಸಿ, ಅವರ ಅಭಿಪ್ರಾಯಗಳನ್ನು ಆಲಿಸಿ ಎಲ್ಲರಿಗೂ ಉಪಯೋಗವಾಗುವಂತಹ ಕಾರ್ಯಗಳನ್ನು ಮಾಡುವಂತೆ ಅವರನ್ನು ಪ್ರೋತ್ಸಾಹಿಸಿ.

- **ಉನ್ನತ ನಿರೀಕ್ಷೆಗಳು** : ಸಾಮರ್ಥ್ಯ ಎನ್ನುವುದು ಒಂದೇ ತೆರನಾಗಿರುವುದಿಲ್ಲ. ಸರಿಯಾದ ಬೆಂಬಲ ಕೊಟ್ಟಲ್ಲಿ, ಎಲ್ಲ ವಿದ್ಯಾರ್ಥಿಗಳೂ ಕಲಿತು ಪ್ರಗತಿ ಸಾಧಿಸಬಹುದು. ನೀವು ತರಗತಿಯಲ್ಲಿ ವಿವರಿಸುತ್ತಿರುವ ವಿಚಾರವು ಒಬ್ಬ ವಿದ್ಯಾರ್ಥಿಗೆ ಅರ್ಥವಾಗುತ್ತಿಲ್ಲ ಎಂದ ಮಾತ್ರಕ್ಕೆ ಅವರು ಎಂದೂ ಕಲಿಯಲಾರರು ಎಂದರ್ಥವಲ್ಲ. ಶಿಕ್ಷಕರಾಗಿ ನೀವು ಪ್ರತಿಯೋರ್ವ ವಿದ್ಯಾರ್ಥಿಗೆ ಕಲಿಸಲು ಉತ್ತಮೋತ್ತಮ ವಿಧಾನಗಳನ್ನು ತಿಳಿಯಬೇಕು.
- ನಿಮ್ಮ ತರಗತಿಯ ಎಲ್ಲ ವಿದ್ಯಾರ್ಥಿಗಳ ಬಗ್ಗೆ ನಿರೀಕ್ಷೆ ಇದ್ದರೆ, ಅವರು ಮುಂದುವರಿಯುತ್ತ ಹೋದರೆ ಕಲಿತೇ ಕಲಿಯುತ್ತಾರೆ ಎಂಬ ಭರವಸೆ ನಿಮ್ಮಲ್ಲಿ ಮೂಡುತ್ತದೆ. ಈ ಉನ್ನತ ನಿರೀಕ್ಷೆಗಳು ಅವರ ವರ್ತನೆಯ ಬಗ್ಗೆಯೂ ಇರಬೇಕು. ಆದರೆ ನಿಮ್ಮ ನಿರೀಕ್ಷೆ ಸ್ಪಷ್ಟವಾಗಿರಬೇಕು ವಿದ್ಯಾರ್ಥಿಗಳು ಪರಸ್ಪರರನ್ನು ಗೌರವಿಸುತ್ತಾರೆ ಎಂಬುದಾಗಿರಬೇಕು.
- **ನಿಮ್ಮ ಅಧ್ಯಾಪನದಲ್ಲಿ ವೈವಿಧ್ಯವನ್ನು ತನ್ನಿ** : ವಿದ್ಯಾರ್ಥಿಗಳು ಹಲವು ರೀತಿಗಳಲ್ಲಿ ಕಲಿಯುತ್ತಾರೆ. ಕೆಲವರಿಗೆ ಬರೆಯಲು ಇಷ್ಟ. ಕೆಲವರು ತಮ್ಮ ವಿಚಾರಗಳನ್ನು ಪ್ರತಿನಿಧಿಸಲು ಮಾನಸ ನಕ್ಷೆಗಳನ್ನು (mind maps) ಅಥವಾ ಚಿತ್ರಗಳನ್ನು ಬರೆಯುತ್ತಾರೆ. ಕೆಲವರು ಚೆನ್ನಾಗಿ ಆಲಿಸುತ್ತಾರೆ. ಕೆಲವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವಾದಾಗ ಚೆನ್ನಾಗಿ ಕಲಿಯುತ್ತಾರೆ. ಎಲ್ಲ ವಿದ್ಯಾರ್ಥಿಗಳಿಗೂ ಎಲ್ಲ ಕಾಲದಲ್ಲೂ ಇದೆಲ್ಲವೂ ಸರಿಬಾರದೇ ಹೋಗಬಹುದು. ಆದರೆ ನಿಮ್ಮ ಅಧ್ಯಾಪನದಲ್ಲಿ ವೈವಿಧ್ಯವನ್ನು ತುಂಬಿ ಚಟುವಟಿಕೆಗಳನ್ನು ಮಾಡಿಸುವಾಗ ಅವರಿಗೇ ಆಯ್ಕೆಗೆ ಅವಕಾಶ ಕೊಡಿ.
- **ಕಲಿಕೆಯನ್ನು ದೈನಂದಿನ ಜೀವನಕ್ಕೆ ಹೊಂದಿಸಿ** : ಕೆಲವು ವಿದ್ಯಾರ್ಥಿಗಳಿಗೆ ತಾವು ಕಲಿಯುತ್ತಿರುವುದು ದೈನಂದಿನ ಜೀವನಕ್ಕೆ ಪ್ರಸ್ತುತವೇ ಅಲ್ಲ ಎಂಬ ಭಾವನೆ ಇರುತ್ತದೆ. ಹೀಗಾಗದಂತೆ, ಕಲಿಸುವಾಗ ಅವರಿಗೆ ಪರಿಚಿತವಾದ ಹಿನ್ನಲೆಯಿಂದ ಅಥವಾ ಅವರ ದೈನಂದಿನ ಜೀವನದಿಂದ ಉದಾಹರಣೆಗಳನ್ನು ಕೊಡಬಹುದು.
- **ಭಾಷಾ ಪ್ರಯೋಗ :** ನಿಮ್ಮ ಭಾಷಾ ಪ್ರಯೋಗದ ಬಗ್ಗೆ ಎಚ್ಚರವಿರಲಿ. ಸದಾ ಸಕಾರಾತ್ಮಕ ನುಡಿಗಳನ್ನೇ ಆಡಿ, ವಿದ್ಯಾರ್ಥಿಗಳನ್ನು ಗೇಲಿ ಮಾಡಬೇಡಿ. ದೂಷಿಸುವುವುದಿದ್ದ್ ರೆ ಅವರ ವರ್ತನೆಯನ್ನು ದೂಷಿಸಿ, ಅವರ ವ್ಯಕ್ತಿತ್ವವನ್ನಲ್ಲ. "ನೀನು ನನಗೆ ಕೋಪ ಬರಿಸುತ್ತಿದ್ದೀಯೆ!" ಎಂದು ಹೇಳುವುದು ವ್ಯತಿಗತವೆನಿಸಬಹುದು. ಅದರ ಬದಲು "ಇವತ್ತು ನಿನ್ನ ವರ್ತನೆ ಕೋಪ ಬರಿಸುವ ರೀತಿಯಲ್ಲಿದೆ. ಹೀಗೆ ನಿನ್ನ ಏಕಾಗ್ರತೆ ವಿಚಲಿತವಾಗಲು ಏನಾದರೂ ಕಾರಣ ಇದೆಯೇ?" ಎಂದು ಕೇಳುವುದು ಹೆಚ್ಚು ಸೂಕ್ತ.
- **ಏಕತಾನತೆಯ ಅಭಿಪ್ರಯಾವನ್ನು ಭಂಜಿಸಿ :** ಹೆಣ್ಣುಮಕ್ಕಳನ್ನು ಮಾಮೂಲಿ ಪಾತ್ರಗಳಲ್ಲೇ ಚಿತ್ರಿಸುವ ಬದಲು ಬೇರೊಂದು ಪಾತ್ರದಲ್ಲಿ ತೋರಿಸುವ ಸಾಧನೆಗಳನ್ನು ಹುಡುಕಿ, ಮಹಿಳಾ ಸಾಧಕಿಯರನ್ನು, ಉದಾಹರಣೆಗೆ- ವಿಜ್ಞಾನಿಗಳನ್ನು ನಿಮ್ಮ ಶಾಲೆಗೆ ಆಹ್ವಾನಿಸಿ. ಪುರುಷರೋ ಸ್ತ್ರೀಯರೋ ಆಗಿ ನಿಮ್ಮ ಸ್ಥಾನವನ್ನೂ ಅರಿತಿರಿ.
- **ಏಕತಾನ ಅಭಿಪ್ರಾಯ :** ಹೆಣ್ಣುಮಕ್ಕಳೂ ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ ಹಾಗೂ ಗಂಡುಮಕ್ಕಳೂ ಕಾಳಜಿ ಭಾವ ತೋರಿಸಬಲ್ಲರು ಎಂದು ನಮಗೆ ಗೊತ್ತೇ ಇದೆ. ಆದರೂ ನಾವು ವ್ಯತಿರಿಕ್ತವಾಗಿಯೇ ಧೋರಣೆ ತಾಳುತ್ತೇವೆ. ಏಕೆಂದರೆ ಸಮಾಜದಲ್ಲಿ ಅದೇ ಪ್ರಚಲಿತವಿರುವ ಭಾವ.
- **ಸುರಕ್ಷಿತವೂ ಸ್ನೇಹಯುತವೂ ಆದ ಶೈಕ್ಷಣಿಕ ಪರಿಸರವನ್ನು ನಿರ್ಮಿಸಿ:** ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸುರಕ್ಷೆ ಹಾಗೂ ಸ್ನೇಹದ ಭಾಸವಾಗಬೇಕು. ಪರಸ್ಪರರಲ್ಲಿ ಗೌರವ ಹಾಗೂ ಸ್ನೇಹಯುತ ವರ್ತನೆಯನ್ನು ಪ್ರೋತ್ಸಾಹಿಸುವುದರ ಮೂಲಕ ನೀವು ವಿದ್ಯಾರ್ಥಿಗಳಿಗೆ ಈ ಅನುಭವವನ್ನು ಒದಗಿಸಬಹುದು.
- ಶಾಲೆ ಹಾಗೂ ತರಗತಿಗಳ ಬಗ್ಗೆ ಬೇರೆ ಬೇರೆ ವಿದ್ಯಾರ್ಥಿಗಳಿಗೆ ಹೇಗೆ ಬೇರೆ ಬೇರೆ ಅಭಿಪ್ರಾಯಗಳಿವೆ ಎನ್ನುವುದನ್ನು ಆಲೋಚಿಸಿ. ಅವರು ಎಲ್ಲಿ ಕುಳಿತುಕೊಳ್ಳಬೇಕು, ಕಿವಿ ಅಥವಾ ಕಣ್ಣು ವೈಕಲ್ಯಗಳಿರುವವರಿಗೆ ಎಲ್ಲಿ ಕುಳಿತರೆ ಚೆನ್ನಾಗಿ ಕಲಿಯಲು ಸಾಧ್ಯ ಎನ್ನುವುದನ್ನೂ ಚಿಂತಿಸಿ.
- ಸಂಕೋಚ ಅಥವಾ ಬೇಗ ವಿಚಲಿತವಾಗುವ ಮನೋಭಾವದ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಮಾಡಲು ಏನು ಮಾಡಬೇಕೆನ್ನುವುದನ್ನೂ ಆಲೋಚಿಸಿ.

**ನಿರ್ದಿಷ್ಟ ಶಿಕ್ಷಣದ ವಿಧಾನಗಳು**

ವಿದ್ಯಾರ್ಥಿಗಳನ್ನು ಸಮಾನವಾಗಿ ಭಾಗವಹಿಸುವಂತೆ ಮಾಡಕ್ಲು ಹಲವು ವಿಧಾನಗಳಿವೆ. ಇತರ ಮೂಲ ಪಟ್ಃಯದಲ್ಲಿ ಇವುಗಳನ್ನು ಚರ್ಚಿಒಸಲಾಗಿಉದೆ. ಆದರೂ ಇಲ್ಲಿ ಒಂನ್ದು ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ.

- ಪ್ರಶ್ನಿಸುವಿಕೆ: ಕೈ ಮೇಲೆತ್ತಿ ಎಂದಾಗ ಅದದೇ ವಿದ್ಯಾರ್ಥಿಗಳೆ ಕೈ ಮೇಲೆತ್ತಿ ಉತ್ತರಿಸುವುದು ಸಹಜ. ಆದರೆ ಉತ್ತರಗಳನ್ನು ಚಿಂತಿಸುವಂತೆ ಮಾಡಲು ಇತರ ವಿಧಾನಗಳೂ ಇವೆ, ನೀವು ನಿರ್ದಿಷ್ಟ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಬಹುದು, 'ನೀವು ಯಾರನ್ನು ಕೇಲುತ್ತೀರೋ ಅವರೇ

ಉತ್ತರಿಸಬೇಕು' ಎನ್ನುವುದನ್ನು ತರಗತಿಯಲ್ಲಿ ಘೋಷಿಸಿ, ಕೇವಲ ಮುಂದಿನ ಸಾಲಿನ ಮಕ್ಕಳನ್ನೇ ಪ್ರಶ್ನೆ ಕೇಳುವ ಬದಲು, ಮೂಲೆಗಳಲ್ಲಿ, ಹಿಂದಿನ ಸಾಲುಗಳಲ್ಲಿ ಕುಳಿತಂತಹ ಮಕ್ಕನ್ನೂ ಕೇಳಿರಿ. ಆಲೋಚಿಸಲು ಸ್ವಲ್ಪ ಸಮಯವನ್ನೂ ಕೊಟ್ಟು ನಿರ್ದಿಷ್ಟ ವ್ಯಕ್ತಿಗಳೇ ಉತ್ತರಿಸಬೇಕು ಎಂದು ಹೇಳಿ,

- ಜೋಡಿ ಅಥವಾ ಗುಂಪುಗಳಲ್ಲಿ ಜೋಡಿಸಿ ಎಲ್ಲರೂ ಪ್ರಕ್ರಿಯೆಯಲ್ಲಿ ಸೇರುವಂತೆ ಮಾಡಿ, ಆತ್ಮವಿಶ್ವಾಸವನ್ನು ಹೆಚ್ಚಿಸಿ.
- ಮೌಲ್ಯಮಾಪನ: ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವಂತೆ ಮೌಲ್ಯಮಾಪನದ ಹಲವಾರು ವಿಧಾನಗಳನ್ನು ಆವಿಷ್ಕರಿಸಿರಿ. ಸುಪ್ತ ಪ್ರತಿಭೆಗಳನ್ನು ಅಥವಾ ಅಸಾಮರ್ಥ್ಯಗಳನ್ನು ಗುರುತಿಸಬೇಕಾದರೆ ನೀವು ಸರ್ಜನಶೀಲವಾಗಿರಬೇಕಾಗುತ್ತದೆ. ವಿದ್ಯಾರ್ಥಿಗಳ ಬಗ್ಗೆ ಜನಜನಿತವಾದ ಅಭಿಪ್ರಾಯಗಳು, ಅಂದಾಜುಗಳು ಇದ್ದಾವು. ಆದರೆ ರಚನಾತ್ಮಕ ಗೃಹಕಾರ್ಯವನ್ನು ಕೊಡುವ ಮೂಲಕ ನಿಮಗೆ ಆ ಅಂದಾಜಿನ ಬದಲು ಖಚಿತವಾದ ಮಾಹಿತಿಯೇ ಸಂಗ್ರಹವಾಗುತ್ತದೆ. ಆಗ ಮಾತ್ರ ನೀವು ಅವರ ವೈಯಕ್ತಿಕ ಅಗತ್ಯಗಳನ್ನು ಅರ್ಥಮಾಡಿಕೊಂಡು ಸ್ಪಂದಿಸುವ ಮಟ್ಟಕ್ಕೆ ಏರಬಲ್ಲಿರಿ.
- ತಂಡಕಾರ್ಯ ಹಾಗೂ ಜೋಡಿ ಕಾರ್ಯ : ನಿಮ್ಮ ತರಗತಿಯನ್ನು ಗುಂಪುಗಳನ್ನಾಗಿ ವಿಭಜಿಸುವಾಗ ಹೇಗೆ ಮಾಡಬೇಕು ಎನ್ನುವುದನ್ನು ಆಲೋಚಿಸಿರಿ. ಎಲ್ಲರೂ ಭಾಗವಹಿಸುವಂತಾಗಬೇಕು ಹಾಗೂ ಎಲ್ಲ ವಿದ್ಯಾರ್ಥಿಗಳು ಪರಸ್ಪರರಿಗೆ ಬೆಲೆ ಕೊಡುವಂತಿರಬೇಕು. ಎಲ್ಲ ವಿದ್ಯಾರ್ಥಿಗಳಿಗೂ ಪರಸ್ಪರರಿಂದ ಕಲಿಯಲು ಸಾಧ್ಯವಾಗುತ್ತಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಿ. ಅವರಿಗೆ ಯಾವ ವಿಚಾರ ಗೊತ್ತಿರುತ್ತದೋ ಆ ವಿಚಾರವನ್ನೇ ಹಿಡಿದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತ ಹೋಗಿ.
- ಕೆಲವು ವಿದ್ಯಾರ್ಥಿಗಳು ಚಿಕ್ಕ ಗುಂಪುಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೂ ಪ್ರಶ್ನಿಸುವುದಕ್ಕೂ ಆತ್ಮವಿಶ್ವಾಸವನ್ನು ಪಡೆದಿರುತ್ತಾರೆ. ಆದರೆ ಇಡಿಯ ತರಗತಿಯ ಮುಂದೆ ಹಾಗೆ ಮಾಡಲು ಹೆದರುತ್ತಾರೆ.
- ವಿಂಗಡಿಸುವಿಕೆ : ಬೇರೆ ಬೇರೆ ಗುಂಪುಗಳಿಗೆ ಬೇರೆ ಬೇರೆ ಕಾರ್ಯಗಳನ್ನು ಕೊಡುವುದರ ಮೂಲಕ ವಿದ್ಯಾರ್ಥಿಗಳು ಅವರಿರುವ ಮಟ್ಟದಿಂದ ಪ್ರಾರಂಭಿಸಿ ಪ್ರಗತಿಯನ್ನು ಸಾಧಿಸುತ್ತ ಸಾಗುತ್ತಾರೆ. ಎಲ್ಲ ವಿದ್ಯಾರ್ಥಿಗಳಿಗೂ ಯಶಸ್ವಿಯಾಗಲು ಅನುಕೂಲಿಸುವಂತ ಮುಕ್ತಸ್ವರೂಪದ ಕಾರ್ಯಗಳನ್ನು ಕೊಡಿ. 'ಯಾವ ಕಾರ್ಯವನ್ನು ಆಯ್ದುಕೊಳ್ಳುತ್ತೀರಿ?' ಎಂದು ಅವರನ್ನೇ ಕೇಳುವುದರ ಮೂಲಕ ವಿದ್ಯಾರ್ಥಿಗಳಿಗೆ ಆ ಕಾರ್ಯದ ಬಗ್ಗೆ ಸ್ವಾಮ್ಯದ ಭಾವ ಮೂಡುತ್ತದೆ, ಅವರು ಕಲಿಯುವ ಜವಾಬ್ದಾರಿಯನ್ನೂ ವ್ಯಕ್ತಪಡಿಸುತ್ತಾರೆ.
- ದೊಡ್ಡ್ ತರಗತಿಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ವೈಯಕ್ತಿಕ ಕಲಿಕೆಯನ್ನು ವಹಿಸಿಕೊಳ್ಳುವುದು ಕಷ್ಟ. ಆದರೆ ಬಗೆ ಬಗೆಯ ಕಾರ್ಯಚಟುವಟಿಕೆಗಳನ್ನು ಮಾಡಿಸುವುದಕ್ಕಂತೂ ಸಾಧ್ಯ.

# ಸಂಪನ್ಮೂಲ 2 : ವಿಭಿನ್ನತೆಗಳ ಮೇಲೊಂದು ಚಿಂತನೆ

**ಸರಣಿ R2.1 ವಿಭಿನ್ನತೆಗಳ ಮೇಲೆ ಚಿಂತನ – ಖಾಲಿ ಪಲಕ (ಚಟುವಟಿಕೆ 4)**

| ಅ | ಅ | ಇ | ಈ | ಉ |
|---|---|---|---|---|
| # | ವಿಭಿನ್ನತೆಯ ಬಗೆ | ವಿದ್ಯಾರ್ಥಿಗಳ ಸಂಖ್ಯೆಯ ಪ್ರತಿಶತ | ಅವಕಾಶವಿರುವವರ, ಭಾಗವಹಿಸುವವರ ಹಾಗೂ ಶಾಲೆಯಲ್ಲೂ ಮನೆಯಲ್ಲೂ ಶೈಕ್ಷಣಿಕ ಸಾಧನೆ ಮಾಡುವವರ ಪ್ರತಿಶತಗಣನೆಯ ಅಂದಾಜು | ಕಾರ್ಯತಂರಗಳು, ಮಾರ್ಪಾಡುಗಳು ಹಾಗೂ ಕೂಡಿ ಕಾರ್ಯಗ್ಳೈಯಬೇಕಾದ ಸಿಬ್ಬಂದಿವರ್ಗ |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

# ಮೂಲಗಳು ಹಾಗೂ ಗ್ರಂಥಋಣ


Ainscow, M., Booth, T. and Dyson, A. (2006) Improving Schools Developing Inclusion. Abingdon: Routledge.

Artiles, A., Kozleski, E., Dorn, S. and Christensen, C. (2006). 'Learning in inclusive education research: remediating theory and methods with a transformative agenda', Review of Research in Education, no. 30, pp. 65–108.

Causton-Theoharis, J. (2009) 'The golden rule of providing support in inclusive classrooms: support others as you would wish to be supported', Teaching Exceptional Children, vol. 42, no. 2, pp. 36–43.

De Silva, N.L. (2013) 'Inclusive pedagogy in light of social justice. special educational rights and inclusive classrooms: on whose terms? A field study in Stockholm suburbs', European Journal of Education, no. 48, pp. 419–35.

Drummond, M.J. and Hart, S. (2013) 'An alternative approach to school development: the children are the evidence', Forum, no. 55, pp. 121–32.

Florian, L. (2013) 'Preparing teachers to work with everybody: a curricular approach to the reform of teacher education', Forum, no. 55, pp. 95–101.

Gutierrez, K. and Correa-Chavez, M. (2006) 'What to do about culture?' Lifelong Learning in Europe, vol. 11, no. 3, pp. 152–9.

Kholofelo, C.M. and Frempong, G. (2014) 'The lived experiences of orphaned learners in South Africa: implications for the provision of quality education', International Journal of Inclusive Education, vol. 18, no. 7, pp. 686–97.

Liasidou, A. (2013) 'Bilingual and special educational needs in inclusive classrooms: some critical and pedagogic considerations', Support for Learning, vol. 28, no. 1, pp. 11–16.

Miles, S. and Singal, N. (2010) 'The education for all and inclusive education debate: conflict, contradictions or opportunities', International Journal of Inclusive Education, vol. 14, no. 1, pp. 1–15.

Tetler, S. and Baltzer, K. (2011) 'The climate of inclusive classrooms: the pupil perspective', London Review of Education, vol. 9, no. 3, pp. 333–44.

United Nations (1989) The United Nations Convention on the Rights of the Child. Available from: http://www.unicef.org.uk/Documents/Publication-pdfs/UNCRC_PRESS200910web.pdf (accessed 16 October 2014).


# Acknowledgements


Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESSIndia project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 1: © The Open University

Figure 2: cartoon, © unknown.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.

Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESSIndia project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 2: adapted from Knoster, T., Villa, R. and Thousand, J. (2000) 'A framework for thinking about systems change', in Villa, R. and Thousand, J. (eds) Restructuring for Caring and Effective Education: Piecing the Puzzle Together, pp. 93–128. Baltimore, MD: Paul H. Brookes Publishing.
Figure 6: adapted from Davies, R. (2012) 'CRM implementation – the effect on users (part 1)', http://www.contactedgecrm.com/2012/03/09/crmimplementation-theeffectonusers-pt1/.
Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.
Video (including video stills): thanks are extended to the teacher educators, headteachers, teachers and students across India who worked with The Open University in the productions.